ಸಂಪುಟ : 8 ಸಂಚಿಕೆ : 274 ಪುಟ : 4 ಬೆಲೆ : 3.00 ರವಿವಾರ ಡಿಸೆಂಬರ್ 10, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 274 Pages : 4 Price : 3.00 Sunday December 10, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಆರುವರೆ ತಿಂಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ರೂ.73,928 ಕೋಟಿ ವೆಚ್ಚ



■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಅಧಿಕಾರಕ್ಕೆ ಬಂದ ಆರುವರೆ ತಿಂಗಳುಗಳ ಆಡಳಿತಾವಧಿಯಲ್ಲಿ ರೂ.73,928 ಕೋಟಿ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸರಣಿ ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ, ಗ್ಯಾರಂಟಿ ಯೋಜನೆಗಳ ಮೂಲಕ ಜನರ ಜೀವನ ಮಟ್ಟ ಸುಧಾರಣೆ ಮತ್ತು ರಾಜ್ಯದ ಅಭಿವೃದ್ಧಿ ಕಾರ್ಯಗಳೆರಡನ್ನೂ ಸಮಾನವಾಗಿ ಮುನ್ನಡೆಸುವ ಮೂಲಕ "ಕರ್ನಾಟಕ ಮಾದರಿ ಆಡಳಿತ"ವೆಂಬ ಹೊಸ ಕಲ್ಪನೆಗೆ ನಾಂದಿಯಾಗಿರುವುದಾಗಿ ಹೇಳಿದ್ದಾರೆ.

ನಮ್ಮ ಸರ್ಕಾರದ ಆರುವರೆ ತಿಂಗಳುಗಳ ಆಡಳಿತಾವಧಿಯಲ್ಲಿ ರೂ.73,928 ಕೋಟಿ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚ ಮಾಡಲಾಗಿದೆ. ಇದೇ ಅವಧಿಯಲ್ಲಿ ಹಿಂದಿನ ಸರ್ಕಾರದ ಅನುದಾನಕ್ಕಿಂತ ರೂ. 3,114 ಕೋಟಿ ಹೆಚ್ಚು ವೆಚ್ಚ ಮಾಡಲಾಗಿದೆ.

ಗ್ಯಾರಂಟಿ ಯೋಜನೆಗಳ ಮೂಲಕ ಜನರ ಜೀವನ ಮಟ್ಟ ಸುಧಾರಣೆ ಮತ್ತು ರಾಜ್ಯದ ಅಭಿವೃದ್ಧಿ ಕಾರ್ಯಗಳೆರಡನ್ನೂ ಹುಬ್ಬಳ್ಳಿಯಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ 16 ಕಂಪನಿಗಳೊಂದಿಗೆ – 1,275 ಕೋಟಿ ಬಂಡವಾಳ ಹೂಡಿಕೆಯ ವಿವಿಧ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಮಾದರಿಯಲ್ಲೇ ಕಾರ್ಮಿಕ ಸಾರಿಗೆ ವಲಯವನ್ನು ಸ್ಥಾಪಿಸಲಾಗುವುದು. ಚಾಲಕರು, ಕ್ಲೀನರ್, ಮೆಕ್ಯಾನಿಕ್‌ಗಳು, ಪಂಕ್ಚರ್ ಅಂಗಡಿಗಳಲ್ಲಿ ಕೆಲಸ ಮಾಡುವವರು ಮತ್ತಿತರರು ಇದರ ಲಾಭ ಪಡೆಯಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಲೀಲಾವತಿಯವರ ಹೆಸರು ಶಾಶ್ವತವಾಗಿ ಉಳಿಯಲು ಸರ್ಕಾರ ಮಟ್ಟದಲ್ಲಿ ಚರ್ಚಿಸಿ ತೀರ್ಮಾನ: ಡಿಸಿಎಂ ಡಿ ಕೆ ಶಿವಕುಮಾರ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಹಿರಿಯ ನಟಿ ಲೀಲಾವತಿಯವರು ಕಷ್ಟಗಳನ್ನು ದಿಟ್ಟತನದಿಂದ ಎದುರಿಸಿ ಪರೋಪಕಾರ, ಸಮಾಜಸೇವೆ, ಕೃಷಿ ಚಟುವಟಿಕೆ ಮಾಡಿ ಮಾದರಿಯಾದವರು ಎಂದು ಡಿಸಿಎಂ ಡಿ ಕೆ ಶಿವಕುಮಾರ್ ಹೇಳಿದ್ದಾರೆ.

ಇಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಲೀಲಾವತಿಯವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು.

ಹೆಣ್ಣು ಮಗು ಗ್ರಾಮೀಣ ಪ್ರದೇಶದಲ್ಲಿ ಬೆಳೆದವರು. ಸುಮಾರು 600 ಕ್ಕೂ ಹೆಚ್ಚು ಸಿನಿಮಾ ಅಭಿನಯ ಮಾಡಿದ್ದಾರೆ. 40 ನನಗೆ ಅವರು ಚಿರಪರಿಚಿತ. ಕೊನೆಯ ಭೇಟಿ ಎರಡು ವಾರದ ಹಿಂದೆ ನಮ್ಮ ಮನೆಗೆ ಬಂದಿದ್ದರು. ಪಶುವೈದ್ಯ ಶಾಲೆಯನ್ನು ಕಟ್ಟಿದ್ದೇವೆ, ಉದ್ಘಾಟನೆಗೆ ಬರಬೇಕೆಂದು ಹೇಳಿದ್ದರು. ಎಲೆಕ್ಷನ್ ಒತ್ತಡ ಇತ್ತು, ಆದರೂ ಸೂಕ್ತ ಸಮಯದಲ್ಲಿ ಭಾಗಿಯಾದೆ. ಅದೃಷ್ಟ ಬದಲಾವಣೆ ಆಗಬಹುದು ಆದರೆ ನಿರ್ಧಾರ ಬದಲಾವಣೆ ಆಗಬಾರದು. ಒತ್ತಡದ ನಡುವೆಯೂ ಆ ಕಾರ್ಯಕ್ರಮದಲ್ಲಿ ನಾನು ಭಾಗಿಯಾದ್ದೆ. ಇದು ನನಗೆ ಬಹಳ ಸಂತೋಷ ಆಗಿತ್ತು. ಅನೇಕ ಸಾಹುಕಾರನನ್ನು ನಾನು ನೋಡಿದ್ದೆ. ಇವ್ರೇನು ಸಾಹುಕಾರರು ಆಗಿರಲಿಲ್ಲ. ಇಡೀ ಜೀವನ ತನ್ನ ತಾಯಿ ಸೇವೆಯನ್ನು ವಿನೋದ್ ರಾಜ್ ಮಾಡಿದ್ದಾರೆ. ಅವರನ್ನು ಹಚ್ಚಿಕೊಂಡಿರುವ ನಾಯಿ ಸಹ ನಿನ್ನೆಯಿಂದ ಊಟ ಮಾಡಲಿಲ್ಲ ಎಂದು ಕೇಳಲ್ಪಟ್ಟೆ ಎಂದು ಭಾವುಕರಾಗಿ ಡಿಕೆ ಶಿವಕುಮಾರ್ ನೆನೆಸಿಕೊಂಡರು.

### ವರೂರಿನಲ್ಲಿ 'ವಿಕಸಿತ ಭಾರತ ಸಂಕಲ್ಪ ಯಾತ್ರೆ' | ಫಲಾನುಭವಿಗಳೊಂದಿಗೆ ಪ್ರಧಾನಿ ನೇರ ಸಂವಾದ

# 2047ರೊಳಗೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿ ಭಾರತ ಸೇರ್ಪಡೆಯಾಗಲಿದೆ. ಈ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸಂಕಲ್ಪ ಮಾಡಿದ್ದು, ಭಾರತ ಸಹ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿದೆ. 2047ರೊಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸಲು ನಾನು ಕೂಡ ಬದ್ಧನಿದ್ದೇನೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.

ಶನಿವಾರ ವರೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ದೊರೆಯಬೇಕು. ಜನರಿಗೆ ಖಾಯಿಲೆಗಳು ಬಂದಾಗ ಚಿಕಿತ್ಸೆಗೆ ಹೆಚ್ಚು ಹಣ ಬೇಕಾಗುತ್ತದೆ. ಆಗ ಸರ್ಕಾರದ ಯೋಜನೆಗಳು ಸಹಾಯಕವಾಗಲಿವೆ. ಆಯುಷ್ಮಾನ್ ಭಾರತ ಯೋಜನೆಯಡಿ ಚಿಕಿತ್ಸೆ ಪಡೆಯಬಹುದು. ವ್ಯಾಪಾರ ಆರಂಭಿಸಲು ಮುದ್ರಾ ಯೋಜನೆಯಡಿ ಸಾಲ ಪಡೆದುಕೊಳ್ಳಲು ಅವಕಾಶವಿದೆ. ರಾಸಾಯನಿಕ ಗೊಬ್ಬರದ ಬದಲು ಸಾವಯವ ಗೊಬ್ಬರ ಬಳಸಿ ಬೆಳೆಗಳನ್ನು ಬೆಳೆಯಬೇಕು. ಬ್ಯಾಂಕಿನಿಂದ ಆರ್ಥಿಕ ಸಹಾಯಧನ ಕೂಡಲೇ ದೊರೆಯಲಿದ್ದು, ಅದರ ಉಪಯೋಗವನ್ನು ಪಡೆದುಕೊಳ್ಳಲು ಮುಂದಾಗಬೇಕು.

ಉಜ್ವಲ್ ಯೋಜನೆಯಡಿ 603 ರೂ.ಗೆ ಅಡುಗೆ ಅನಿಲ ಪಡೆಯಬಹುದು. ಪ್ರಧಾನಮಂತ್ರಿ ಕೃಷಿ ಸಮ್ಮಾನ್ ನಿಧಿ ಯೋಜನೆಯಡಿ 2 ಲಕ್ಷ 70 ಸಾವಿರ ರೈತರ ಖಾತೆಗೆ ಹಣ ಜಮಾ ಮಾಡಲಾಗಿದೆ. ಕೇಂದ್ರದ ಯೋಜನೆಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು. ಭಾರತ ಆರ್ಥಿಕವಾಗಿ ಸಬಲವಾಗುತ್ತಿದೆ ಎಂದು ಅವರು ತಿಳಿಸಿದರು.



ಪ್ರಧಾನಿ ನರೇಂದ್ರ ಮೋದಿಯವರು ದೇಶದ ವಿವಿಧೆಡೆಯ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ನೇರ ಸಂವಾದ ನಡೆಸಿದರು. ತುಮಕೂರಿನ ಮುಖೇಶ ಅವರು ಪ್ರಧಾನಿಗಳೊಂದಿಗೆ ಸಂವಾದದಲ್ಲಿ ಭಾಗವಹಿಸಿ ಮಾತನಾಡಿ, ಮುದ್ರಾ ಯೋಜನೆಯಡಿ ರೂ. 4.50 ಲಕ್ಷ ಸಾಲ ಪಡೆದು ಕೆಲಸ ಪ್ರಾರಂಭಿಸಿದ್ದೇನೆ. ಈಗ 3 ಜನರಿಗೆ ಉದ್ಯೋಗ ನೀಡಿದ್ದೇನೆ ಎಂದಾಗ, ಮುಂದಿನ ದಿನಗಳಲ್ಲಿ ಇನ್ನಷ್ಟು ಬೆಳೆಯಿರಿ, ಯುವ ಜನರಿಗೆ ಮತ್ತಷ್ಟು ಸಹಾಯ ಮಾಡುವಂತಾಗಿ ಎಂದು ಪ್ರಧಾನಿ ನರೇಂದ್ರ ಮೋದಿ ಹಾರೈಸಿದರು.

▶▶ 3ನೇ ಪುಟಕ್ಕೆ

### ತಾಲೂಕು ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವ ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ

# ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಿ

■ ವಿಜಯಸಾಕ್ಷಿ ಸುದ್ದಿ, ರೋಣ

ನನ್ನ ಐದು ವರ್ಷಗಳ ಅವದಿಯಲ್ಲಿ ಮತಕ್ಷೇತ್ರದ ಪ್ರತಿ ಗ್ರಾಮದಲ್ಲೊಂದು ಸುಂದರ ಶಾಲೆಯನ್ನು ನಿರ್ಮಿಸುವ ಮೂಲಕ ಶೈಕ್ಷಣಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುವುದು ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಅವರು ಶನಿವಾರ ತಾಲೂಕಿನ ಇಟಗಿ ಗ್ರಾಮದ ಆದರ್ಶ ಶಾಲೆಯಲ್ಲಿ ಜರುಗಿದ ರೋಣ, ಗಜೇಂದ್ರಗಡ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮತಕ್ಷೇತ್ರದ ಗ್ರಾಮದಲ್ಲಿರುವ ಸರಕಾರಿ ಶಾಲೆಗಳ ಕೊಠಡಿಗಳು ಶಿಥಿಲಗೊಂಡಿದ್ದರೆ ಅವುಗಳನ್ನು ಪಟ್ಟಿ ಮಾಡಿ ನೀಡುವಂತೆ ಈಗಾಗಲೇ ಅಧಿಕಾರಿಗಳಿ ತಿಳಿಸಲಾಗಿದೆ. ಶಿಥಿಲಗೊಂಡಿರುವ ಕೊಠಡಿಗಳಿಗೆ ಮರು ವಿನ್ಯಾಸ ಕಲ್ಪಿಸುವ ಮೂಲಕ ಅವುಗಳನ್ನು ಸುಂದರ ಕಟ್ಟಡಗಳನ್ನಾಗಿ ನಿರ್ಮಿಸಿ, ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

ಮಕ್ಕಳಲ್ಲಿ ಅಡಕವಾಗಿರುವ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸಲು ಸರಕಾರ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಮಕ್ಕಳು ಸಹ ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ತಮ್ಮಲ್ಲಿರುವ ಪ್ರತಿಭೆಯನ್ನು ವ್ಯಕ್ತಪಡಿಸಬೇಕು. ಮುಖ್ಯವಾಗಿ ಶಿಕ್ಷಕರು ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾದ ವಾತವರಣವನ್ನು ನಿರ್ಮಿಸಿ, ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಬೇಕು. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರೋಣ, ಗಜೇಂದ್ರಗಡ ತಾಲೂಕುಗಳು ಪ್ರಥಮ ಸ್ಥಾನದಲ್ಲಿ ಇರುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಶಿಕ್ಷಕ ವೀರಪ್ಪ ಮಾದರ ಬರೆದಿರುವ 'ವಿಜ್ಞಾನಗಳ ನಾಟಕ' ಎಂಬ ಪುಸ್ತಕವನ್ನು ಶಾಸಕರು ಬಿಡುಗಡೆಗೊಳಿಸಿದರು. ನಂತರ, ವಿಕಲಚೇತನ ಮಕ್ಕಳಿಗೆ ಸೈಕಲ್ ವಿತರಿಸಿದರು. ಆದರ್ಶ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಹೇಮಂತಗೌಡ ಮಾಲಿಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಬಿಇಓ ರುದ್ರಪ್ಪ ಹುರಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತಾ.ಪಂ ಮಾಜಿ ಸದಸ್ಯ ಪ್ರಭು ಮೇಟಿ, ವಿ.ಬಿ. ಸೋಮನಕಟ್ಟಿಮಠ, ಯೂಸುಫ್ ಇಟಗಿ, ಇಸ್ಮಾಹಿಲ್ ಹೊರಪೇಟಿ, ವಿಜಯಲಕ್ಷ್ಮೀ ಕೊಡಗಾನೂರ, ಪ್ರಶಾಂತ ಕೊಮಾರ, ಸಂಗಪ್ಪ ಹುದ್ದಾರ, ಬಸ್ಸಪ್ಪ ಹಾದಿಮನಿ, ಬಾಬು ಗಡಾದ, ಶರಣಪ್ಪ ಹುದ್ದಾರ್, ಬಸವರಾಜ ಅಂಗಡಿ, ಎ.ಕೆ. ಒಂಟಿ, ವಾಯ್.ಡಿ. ಗಾಣಿಗೇರ, ವಿ.ಎಸ್. ಹಾದಿಮನಿ, ಸಿ.ಕೆ. ಕೇಸರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ತಾಲೂಕಿನಲ್ಲಿ ಶಾಲೆಗೆ ಬರುತ್ತಿರುವ ವಿಕಲಚೇತನ ಮಕ್ಕಳ ಸಂಖ್ಯೆ 825. ಅದರಲ್ಲಿ 240 ಮಕ್ಕಳು ವಿಕಲಚೇತನ ಸೈಕಲ್ ಯೋಜನೆಗೆ ಅರ್ಹರಾಗಿದ್ದು, ಈಗ 120 ಮಕ್ಕಳಿಗೆ ಪರಿಕರ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ಮಕ್ಕಳಿಗೂ ಶೀಘ್ರವೇ ಸೈಕಲ್ ವಿತರಿಸಲಾಗುವುದು.

**– ಜಿ.ಎಸ್. ಪಾಟೀಲ.**
**ಶಾಸಕರು, ರೋಣ.**

### ಪಂ.ಪುಟ್ಟರಾಜ ಕವಿ ಗವಾಯಿಗಳಿಗೆ ಭಾರತ ರತ್ನ ನೀಡುವಂತೆ ಆಗ್ರಹ

# ಡಿ.11ರಂದು 'ಗದಗ ಬಂದ್'

■ ವಿಜಯಸಾಕ್ಷಿ ಸುದ್ದಿ, ಗದಗ




ನಾಡಿನೆಲ್ಲೆಡೆ 'ನಡೆದಾಡುವ ದೇವರು' ಎಂದೇ ಗೌರವಿಸಲ್ಪಡುತ್ತಿದ್ದ ಲಿಂ. ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರಿಗೆ 'ಭಾರತ ರತ್ನ' ಗೌರವ ನೀಡಬೇಕು ಹಾಗೂ ನಗರದ ರೈಲ್ವೆ ನಿಲ್ದಾಣಕ್ಕೆ ಪುಟ್ಟರಾಜರ ಹೆಸರನ್ನು ನಾಮಕರಣ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಡಾ. ಪಂ. ಪುಟ್ಟರಾಜ ರೈತ ಸಂಘ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಡಿಸೆಂಬರ್ 11ರಂದು ಗದಗ ಬಂದ್‌ಗೆ ಕರೆ ನೀಡಲಾಗಿದೆ ಎಂದು ಮಲ್ಲಸಮುದ್ರದ ಪೂಜ್ಯಶ್ರೀ ಫಕ್ಕಿರೇಶ್ವರ ಹಿರೇಮಠ ಸ್ವಾಮೀಜಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪೂಜ್ಯಶ್ರೀ ಪಂ. ಪುಟ್ಟರಾಜ ಕವಿಗವಾಯಿಗಳು ಲಿಂಗೈಕ್ಯರಾಗಿ 13 ವರ್ಷಗಳು ಕಳೆದರೂ ನಾಡಿನಾದ್ಯಂತ ಲಕ್ಷಾಂತರ ಅಂಧ-ಅನಾಥರ ಬದುಕಿಗೆ ಬೆಳಕಾದ ಪಂ. ಪುಟ್ಟರಾಜ ಗವಾಯಿಗಳವರ ಸಮಾಜಸೇವೆ ಸರಕಾರದ ಕಣ್ಣಿಗೆ ಕಾಣದೇ ಇರುವುದು ನೋವಿನ ಸಂಗತಿ. ಅವರಿಗೆ ಕರ್ನಾಟಕ ರತ್ನ ಹಾಗೂ ಭಾರತ ರತ್ನ ಪ್ರಶಸ್ತಿ ನೀಡುವಲ್ಲಿ ಸರಕಾರ ಕಡೆಗಣಿಸುತ್ತಿರುವುದು ಶ್ರೀಗಳ ಅಪಾರ ಭಕ್ತರಿಗೆ ಅತೀವ ನೋವು, ಬೇಸರ ತಂದಿದೆ.

ಹಲವು ದಶಕಗಳ ಹಿಂದೆ ಪಂಚಾಕ್ಷರಿ ಗವಾಯಿಗಳು ಭಕ್ತರ ಸಹಾಯದಿಂದ ನಗರದಲ್ಲಿ ಪಂಚಾಕ್ಷರಿ ಗವಾಯಿ ಮಠ ನಿರ್ಮಾಣ ಮಾಡಿದರು. ಪಂಚಾಕ್ಷರಿ ಗವಾಯಿಗಳು ಲಿಂಗೈಕ್ಯರಾದ ನಂತರ ಪಂ. ಪುಟ್ಟರಾಜ ಕವಿ ಗವಾಯಿಗಳು ಪೀಠವನ್ನು ಅಲಂಕರಿಸಿ, ಗದಗ ಜಿಲ್ಲೆಯ ಕೀರ್ತಿಯನ್ನು ದೇಶ-ವಿದೇಶದವರೆಗೂ ಹರಡಿದ್ದಾರೆ. ಇದರೊಂದಿಗೆ ಸಂಸ್ಕೃತದಲ್ಲಿ 'ಯಡಿಯೂರ ಸಿದ್ದಲಿಂಗೇಶ್ವರ' ಪುಸ್ತಕ ಬರೆದಿದ್ದಾರೆ. ಅವರು ಅಂಧರಾದರೂ ಅಂತರಂಗದಲ್ಲಿ ಅಪಾರ ಜ್ಞಾನ ಹೊಂದಿದ್ದರು. ಹಿಗಾಗಿ ಪುಟ್ಟರಾಜ ಕವಿ ಗವಾಯಿಗಳಿಗೆ ಕರ್ನಾಟಕ ರತ್ನ, ಭಾರತ ರತ್ನ ಗೌರವ ಹಾಗೂ ಇಲ್ಲಿನ ರೈಲ್ವೆ ನಿಲ್ದಾಣಕ್ಕೆ ಪಂ. ಪುಟ್ಟರಾಜರ ಹೆಸರು ನಾಮಕರಣ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜ್ಯೋತಿ ಕುಲಕರ್ಣಿ, ಜಹಿರಾಬಿ ನದಾಫ್, ಎಂ.ಪಿ. ಮುಳಗುಂದ, ಕೆ.ಎ. ಖಾಜಿ, ಸಿರಾಜ್ ಲಕ್ಕುಂಡಿ ಮುಂತಾದವರು ಉಪಸ್ಥಿತರಿದ್ದರು.

ಈ ವಿಚಾರವಾಗಿ ಸರಕಾರದ ಕಣ್ಣು ತೆರೆಸಲು ಡಿ.11ರಂದು ಗದಗ ಬಂದ್‌ಗೆ ನಿರ್ಣಯಿಸಲಾಗಿದೆ. ಈ ಹೋರಾಟದಲ್ಲಿ ವಿವಿಧ ಮಠಾದೀಶರು, ಭಕ್ತರು, ವಿದ್ಯಾರ್ಥಿಗಳು, ಕರವೇ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಎಲ್ಲರೂ ಸ್ವ ಇಚ್ಛೆಯಿಂದ ಭಾಗವಹಿಸುತ್ತಿದ್ದು, ಪಂಚಾಕ್ಷರಿ ಗವಾಯಿ ಮಠದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪಾದಯಾತ್ರೆ ಮೂಲಕ ತೆರಳಿ ಮನವಿ ಸಲ್ಲಿಸಲಾಗುವುದು.

**– ಶ್ರೀ ಫಕ್ಕಿರೇಶ್ವರ ಹಿರೇಮಠ ಸ್ವಾಮೀಜಿ.**
**ಮಲ್ಲಸಮುದ್ರ.**

## ಇಬ್ಬರು ಡ್ರಗ್ಸ್ ಪೆಡ್ಲರ್‌ಗಳ ಬಂಧನ

■ ವಿಜಯಸಾಕ್ಷಿ ಸುದ್ದಿ, ಮಂಗಳೂರು

ನಗರದಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನಿಷೇಧಿತ ಮಾದಕ ವಸ್ತುವನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರನ್ನು ಬಂಧಿಸಿರುವ ಇಲ್ಲಿನ ಕೇಂದ್ರ ಅಪರಾಧ ವಿಭಾಗದ ಪೊಲೀಸರು, ಅವರ ಬಳಿಯಿದ್ದ 6 ಲಕ್ಷ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಪೊಲೀಸರು ನಗರದ ಕದ್ರಿ ಪಾರ್ಕ್‌ನಲ್ಲಿ ದಾಳಿ ನಡೆಸಿ ಇಬ್ಬರು ಆರೋಪಿಗಳಿಂದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ಕೇರಳದ ಕಾಸರಗೋಡು ಜಿಲ್ಲೆಯ ಮಂಜೇಶ್ವರದ ನವಾಝ್ (40) ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಅಜರುದ್ದೀನ್ ಅಲಿಯಾಸ್ ಅಜರ್ (39) ಎಂದು ಗುರುತಿಸಲಾಗಿದೆ. ಆರೋಪಿಗಳಿಂದ 6 ಲಕ್ಷ ರೂ. ಮೌಲ್ಯದ 120 ಗ್ರಾಂ ಎಂಡಿಎಂಎಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮೂರು ಮೊಬೈಲ್ ಫೋನ್‌ಗಳು, ಡಿಜಿಟಲ್ ತೂಕದ ಮಾಪಕ ಮತ್ತು ಮಾದಕ ದ್ರವ್ಯ ಮಾರಾಟಕ್ಕೆ ಬಳಸಲಾದ ಸ್ಕೂಟರ್ ಅನ್ನು ಸಹ ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೌಲ್ಯ 6,83,120 ರೂ. ಎಂದು ಅಂದಾಜಿಸಲಾಗಿದೆ.

# ಹಾಕಿ ಕ್ಷೇತ್ರಕ್ಕೆ ಗದುಗಿನ ಕೊಡುಗೆ ಅಪಾರ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಹಾಗೂ ರಾಷ್ಟ್ರಮಟ್ಟದ ಹಾಕಿ ಕ್ರೀಡಾಪಟುಗಳು ಗದಗ ಜಿಲ್ಲೆಯಿಂದ ಹೊರಹೊಮ್ಮಿದ್ದು, ಹಾಕಿ ಕ್ಷೇತ್ರಕ್ಕೆ ಗದುಗಿನ ಕೊಡುಗೆ ಅಪಾರವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರ ನುಡಿದರು.

ರಾಜ್ಯಮಟ್ಟದ ಪದವಿಪೂರ್ವ ಮಹಾವಿದ್ಯಾಲಯಗಳ ಹಾಕಿ ಪಂದ್ಯಾಟಗಳು ನಡೆಯುತ್ತಿರುವ ನಗರದ ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣಕ್ಕೆ ಶನಿವಾರ ಭೇಟಿ ನೀಡಿ, ಗದಗ ಮತ್ತು ಬೆಂಗಳೂರು ದಕ್ಷಿಣ ತಂಡಗಳ ಸೆಮಿಫೈನಲ್ ಪಂದ್ಯಾಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶೇಷವಾಗಿ ಗಾಂಧಿನಗರ ಭಾಗದ ಹನುಮಾನ್ ಬ್ಲೆಸಿಂಗ್ಸ್ ಸ್ಪೋರ್ಟ್ ಕ್ಲಬ್‌ನ ಆಟಗಾರರು ರಾಷ್ಟ್ರಮಟ್ಟದಲ್ಲಿ ಮಿಂಚಿದ್ದು, ಪ್ರತಿ ವರ್ಷ ಕರ್ನಾಟಕ ವಿಶ್ವವಿದ್ಯಾಲಯದ ಯೂನಿವರ್ಸಿಟಿ ಬ್ಲೂಗಳಾಗಿ ಗದಗಿನ ಹಾಕಿ ಕ್ರೀಡಾಪಟುಗಳ ಹೊರಹೊಮ್ಮುತ್ತಿರುವುದು ಸಂತೋಷದ ಸಂಗತಿ. ಇಂತಹ ಹಾಕಿ ಕ್ರೀಡಾಪಟುಗಳಿಗೆ ಮಾರ್ಗದರ್ಶನ, ಪ್ರೋತ್ಸಾಹ ನೀಡಲು ಪದವಿಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರ ಅವಶ್ಯಕತೆ ಇದೆ.

ಕಾರಣ, ಸರ್ಕಾರವು ಕೂಡಲೇ ದೈಹಿಕ ಶಿಕ್ಷಣ ಉಪನ್ಯಾಸಕರ ನೇಮಕಾತಿ ಮಾಡಬೇಕೆಂದು ತಾವು ಸದನದಲ್ಲಿ ಆಗ್ರಹಿಸಿದ್ದು, ಇದಕ್ಕೆ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಗಿರೀಶ ಟೋಣಪಿ, ವೀಕ್ಷಕರಾದ ಗೋಪಾಲ್, ಉಪ ನಿರ್ದೇಶಕ ಡಾ. ಕೃಷ್ಣಪ್ಪ ಸೇರಿದಂತೆ ಉಪನ್ಯಾಸಕರ, ಪ್ರಾಚಾರ್ಯರ ಸಂಘದ ಪದಾಧಿಕಾರಿಗಳು ಹಾಗೂ ಕ್ರೀಡಾಪಟುಗಳು ಉಪಸ್ಥಿರಿದ್ದರು.

## ಸಂಪಾದಕೀಯ

# ಕೈ ಹಿಡಿಯದ ಮೈತ್ರಿಕೂಟ

ಪಂಚರಾಜ್ಯ ಚುನಾವಣೆ ಫಲಿತಾಂಶದ ನಂತರ ಇಂಡಿಯಾ ಮೈತ್ರಿಕೂಟದಲ್ಲಿ ಬಿರುಕು ಶುರುವಾಗಿದೆ. ಕಾಂಗ್ರೆಸ್ ಸಹಿತ 26 ಪಕ್ಷಗಳು ಒಗ್ಗೂಡಿ ರಚಿಸಿದ ಮೈತ್ರಿಕೂಟ ಪಂಚ ರಾಜ್ಯ ಚುನಾವಣೆ ಫಲಿತಾಂಶದಲ್ಲಿ ಯಾವುದೇ ಪರಿಣಾಮ ಬೀರಿಲ್ಲ.

ತೆಲಂಗಾಣದಲ್ಲಿ ಆಡಳಿತ ವಿರೋಧಿ ಅಲೆ ಕಾರಣದಿಂದಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂದದ್ದು ಬಿಟ್ಟರೆ, ಅಲ್ಲಿಯೂ ಕೂಡ ಇಂಡಿಯಾ ಮೈತ್ರಿಕೂಟದ ಪ್ರಯೋಜನವಾಗಿಲ್ಲ. ಇದರಿಂದಾಗಿ ಮೈತ್ರಿಕೂಟದ ಪಕ್ಷಗಳಲ್ಲಿ ಅಸಮಾಧಾನ ಮತ್ತು ನಿರುತ್ಸಾಹ ಕಂಡುಬಂದಿದೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ಭಾರತ್ ಜೋಡೊ ಪಾದಯಾತ್ರೆ ನಂತರ ದೇಶದಲ್ಲಿ ಕಾಂಗ್ರೆಸ್ ಪರವಾದಂತಹ ಅಲೆ ಇದೆ ಎನ್ನುವ ಅಭಿಪ್ರಾಯ ವ್ಯಕ್ತವಾಗಿತ್ತು. ಪಾದಯಾತ್ರೆ ನಂತರ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ್ದು ಭಾರತ ಜೋಡೋ ಯಾತ್ರೆಯೆ ಕಾರಣ ಎನ್ನುವಂತಹ ವಾತಾವರಣ ನಿರ್ಮಾಣವಾಗಿತ್ತು.

ಕರ್ನಾಟಕ ವಿಧಾನಸಭೆ ಚುನಾವಣೆ ಗೆಲುವಿನ ಹುಮ್ಮಸ್ಸಿನಲ್ಲಿಯೇ ಕಾಂಗ್ರೆಸ್ ಮೈತ್ರಿಕೂಟಕ್ಕೆ ಮುಂದಾಯಿತು. ಭವಿಷ್ಯದ ಪಂಚ ರಾಜ್ಯ ಚುನಾವಣೆಯಲ್ಲಿ ಮೈತ್ರಿಕೂಟ ಬಿಜೆಪಿಯನ್ನು ಮನಸ್ಸಲ್ಲಿದೆ ಎಂದು ಅಂದಾಜಿಸಲಾಗಿತ್ತು. ಚುನಾವಣೆ ಪೂರ್ವ ಮತ್ತು ಚುನಾವಣೋತ್ತರ ಸಮೀಕ್ಷೆಗಳು ಸಹ ಅದನ್ನೆ ಬಿಂಬಿಸಿದ್ದವು. ಆದರೆ ಫಲಿತಾಂಶ ವ್ಯತಿರಿಕ್ತವಾಗಿತ್ತು.

ಪಂಚರಾಜ್ಯ ಚುನಾವಣೆಯ ವೈಫಲ್ಯದಿಂದ ಇಂಡಿಯಾ ಮೈತ್ರಿಕೂಟದ ಪಕ್ಷಗಳು ಕಾಂಗ್ರೆಸ್ ವಿರುದ್ಧ ಮುನಿಸಿಕೊಂಡಂತಾಗಿದೆ. ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗಿಂತ ಮೈತ್ರಿಕೂಟದ ಪಕ್ಷಗಳೇ ಅತಿ ಹೆಚ್ಚು ಸ್ಥಾನಗಳನ್ನ ಗೆದ್ದಿರುವ ಉದಾಹರಣೆಗಳಿವೆ. ಹೀಗಾಗಿ ಮೈತ್ರಿಕೂಟದ ಇನ್ನುಳಿದ ಪಕ್ಷಗಳ ಮೇಲೆ ಸವಾರಿ ನಡೆಸುವ ಸಿದ್ಧತೆಯಲ್ಲಿದ್ದ ಕಾಂಗ್ರೆಸ್ಸಿಗೂ ಆತಂಕ ಎದುರಾಗಿದೆ.

ಮುಖ್ಯವಾಗಿ ಸಮನ್ವಯದ ಕೊರತೆ ಎದ್ದು ಕಂಡಿದೆ. ಸೀಟು ಹಂಚಿಕೆ, ಪಕ್ಷ ಸಂಘಟನೆ, ಮೈತ್ರಿಕೂಟದ ಪ್ರಬಲ ಪ್ರಚಾರದ ಕೊರತೆಯಿಂದಾಗಿ ಪಂಚ ರಾಜ್ಯಗಳಲ್ಲಿ ಮೈತ್ರಿಕೂಟದ ಪಕ್ಷಗಳಿಗೆ ಹಿನ್ನಡೆಯಾಗಿದೆ. ಭವಿಷ್ಯದ ಲೋಕಸಭೆ ಚುನಾವಣೆಯಲ್ಲಿ ಇದೇ ಫಲಿತಾಂಶ ಬರಬಹುದು ಎಂದು ಅಂದಾಜಿಸಿರುವ ಮೈತ್ರಿಕೂಟದ ಪಕ್ಷಗಳು, ಸಹಜವಾಗಿ ಮೈತ್ರಿಕೂಟದಿಂದ ದೂರವಾಗುವ ಸಾಧ್ಯತೆ ಇದೆ. ಒಂದು ವೇಳೆ ಅಸಮಾಧಾನ ಸ್ಫೋಟಗೊಂಡರೆ ಲೋಕಸಭೆ ಚುನಾವಣಾ ವೇಳೆಗೆ ಮೈತ್ರಿಕೂಟ ಬಹುತೇಕ ವಿಸರ್ಜನೆಯಾಗುವುದು ನಿಶ್ಚಿತ.

### ದಶಮಾನೋತ್ಸವ ಆಚರಿಸಿಕೊಳ್ಳುತ್ತಿರುವ 'ಬೀಚಿ ಬಳಗ' ನಡೆದು ಬಂದ ದಾರಿ


# ಹಾಸ್ಯಬ್ರಹ್ಮನ ನೆನಪಿನಲ್ಲಿ 'ಬೀಚಿ ಬಳಗ ನರೇಗಲ್ಲ'

ನರೇಗಲ್ಲ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಪುಟ್ಟ ಪಟ್ಟಣ. ಇಲ್ಲಿ ಶ್ರೀ ಅನ್ನದಾನ ಮಹಾಸ್ವಾಮಿಗಳವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ವಿದ್ಯಾ ಸಂಸ್ಥೆಗಳನ್ನು ತೆರೆದಿದ್ದರಿಂದ ಈ ಊರು ಗ್ರಾಮೀಣ ಭಾಗದ ವಿದ್ಯಾ ಕಾಶಿಯೆಂದು ಹೆಸರಾಗಿದೆ. ಇಂತಿಪ್ಪ ಊರಲ್ಲಿ ಬಹುಶಃ ರಾಜ್ಯದ ಬೇರೆಡೆ ಎಲ್ಲಿಯೂ ಇಲ್ಲದ 'ಬೀಚಿ ಬಳಗ'ವು 2013ರ ಡಿಸೆಂಬರ್ 7ರಂದು ವಿಧ್ಯುಕ್ತವಾಗಿ ಉದ್ಘಾಟನೆಗೊಂಡು ಇಂದು ದಶಮಾನೋತ್ಸವದ ಹೊಸ್ತಿಲಲ್ಲಿ ಬಂದು ನಿಂತಿದೆ.

ಕಾರ್ಯಕ್ರಮವೊಂದಕ್ಕೆ ಗದುಗಿಗೆ ಆಗಮಿಸಿದ್ದ ಗಂಗಾವತಿ ಬೀಚಿ ಬಿ. ಪ್ರಾಣೇಶ್‌ರ ಅರಿಕೆಯಂತೆ ಮೃತ್ಯುಂಜಯ ದಢೇಸೂರಮಠರ ಸಹಕಾರದೊಂದಿಗೆ 'ಬೀಚಿ ಬಳಗ ನರೇಗಲ್ಲ' ಎಂದು ಹೆಸರಿಸಿ ಈ ಬಳಗವನ್ನು ಅದೇ ವರ್ಷದ ಡಿಸೆಂಬರ್ 7ಕ್ಕೆ ನಮ್ಮ ಮನೆಯಲ್ಲಿಯೇ ಉದ್ಘಾಟನೆ ಮಾಡಲಾಯಿತು. ಸಹೋದರರಾದ ಸಾಹಿತಿ ಅನಿಲ ವೈದ್ಯರು ಬಂದು ಈ ಬಳಗವನ್ನು ಉದ್ಘಾಟಿಸಿದ್ದರು. ಆ ಸಮಾರಂಭದಲ್ಲಿ ನಾನು, ಎಂ.ಎಸ್. ದಢೇಸೂರಮಠ, ಡಿ.ಎ. ಅರವಟಗಿಮಠ, ಎಂ.ವಿ. ವೀರಾಪೂರ, ಸುರೇಶ ಹಳ್ಳಿಕೇರಿ, ಸಿ.ಕೆ. ಕೇಸರಿ, ಹೀಗೆ ಅನೇಕ ಸಾಹಿತ್ಯಾಸಕ್ತರು ಪಾಲ್ಗೊಂಡಿದ್ದೆವು.

ಈ ಬಳಗವು ಚೆನ್ನಾಗಿ ನಡೆಯಬೇಕೆಂದರೆ ಇದಕ್ಕೊಂದು ಸಾಂಸ್ಥಿಕ ರೂಪವನ್ನು ಕೊಡಬೇಕೆಂದು ನಿರ್ಧರಿಸಿ, ನಾವೆಲ್ಲ ಒಂದು ನಿಯಮವನ್ನು ಮಾಡಿಕೊಂಡೆವು. ಬೀಚಿ ಬಳಗದ ಮೊದಲ ಅಧ್ಯಕ್ಷರಾಗಿ ನಿವೃತ್ತ ಪ್ರಾಚಾರ್ಯ ಡಿ.ಎ. ಅರವಟಗಿಮಠರು ಕಾರ್ಯ ನಿರ್ವಹಿಸಿದರು. ಗೌರವಾಧ್ಯಕ್ಷರನ್ನಾಗಿ ಜ್ಞಾನದೇವ ದೊಡ್ಡಮೇಟಿಯವರನ್ನು ಆಯ್ಕೆ ಮಾಡಿಕೊಂಡೆವು. ಅದರಂತೆ ಬಳಗದ ಕಾರ್ಯ ಚಟುವಟಿಕೆಗಳು ಒಂದೊಂದಾಗಿ ಪ್ರಾರಂಭವಾಗುತ್ತಿದ್ದಂತೆ ಬಳಗದ ಸಾಹಿತ್ತಿಕ ಕಾರ್ಯಕ್ರಮಗಳನ್ನು ನೋಡಿ ಒಬ್ಬೊಬ್ಬ ಸಾಹಿತ್ಯಾಸಕ್ತರು ಬಳಗದ ಕಡೆಗೆ ಆಕರ್ಷಿತರಾಗಿ ಬರತೊಡಗಿದರು.

ಈ ನಡುವೆ ಕೊರೊನಾ, ಪರೀಕ್ಷೆಗಳು, ಮೌಲ್ಯಮಾಪನ ಮುಂತಾದ ಕಾರ್ಯಗಳಿಂದ ವರ್ಷಕ್ಕೊಮ್ಮೆ ಕ್ರಮವಾಗಿ ನಡೆಯಬೇಕಾದ ನೂತನ ಪದಾಧಿಕಾರಿಗಳ ಆಯ್ಕೆಯ ಕಾರ್ಯ ಹಿಂದಕ್ಕೆ ಬಿದ್ದಿತು. ಎಸ್.ಸಿ. ಗುಳಗಣ್ಣವರ ಅವರು ಬೀಚಿ ಬಳಗದ ಎರಡು ಅವಧಿಗಳನ್ನು ಸಮರ್ಪಕವಾಗಿ ನಿರ್ವಹಿಸಿದಂತೆ ಉಳಿದವರೂ ತಮ್ಮ ಕರ್ತವ್ಯಗಳನ್ನು ಸರ್ವ ಸದಸ್ಯರ ಸಹಕಾರದೊಂದಿಗೆ ಮನಃಪೂರ್ವಕವಾಗಿ ನಿರ್ವಹಿಸಿದ್ದರ ಫಲವಾಗಿ ಇಂದು ಬಳಗವು ದಶಮಾನೋತ್ಸವದ ಬಾಗಿಲಿಗೆ ಬಂದು ನಿಂತಿದೆ.



ಹಾಲಕೆರೆ ಶ್ರೀಮಠದ ಹಿಂದಿನ ಪೀಠಾಧಿಪತಿಗಳಾಗಿದ್ದ ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರಿಗೆ ವಿಜಯನಗರ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಅರ್ಪಣೆಯಾದ ನಿಮಿತ್ಯ ನರೇಗಲ್ಲದ ಎಸ್.ಎ. ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬೀಚಿ ಬಳಗದ ವತಿಯಿಂದ ಗುರು ವಂದನೆಯನ್ನು ಏರ್ಪಡಿಸಲಾಗಿತ್ತು. ಬಳಗದ ಗುರುವಂದನೆಯನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದ ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರು ನೀಡಿದ ಆಶೀರ್ವಚನವು ಬೀಚಿ ಬಳಗದ ಸದಸ್ಯರಿಗೆಲ್ಲ ಅಮೃತ ಸಿಂಚನವನ್ನು ಮಾಡಿಸಿತ್ತು.

ಕೇವಲ ಸಾಹಿತ್ತಿಕ ಕಾರ್ಯಕ್ರಮಗಳಿಗೆ ಮೀಸಲಾಗಿರದೆ ಈ ಬಳಗವು ಸಾಮಾಜಿಕ ಕ್ಷೇತ್ರದಲ್ಲಿಯೂ ತನ್ನ ಸೇವೆಯನ್ನು ಸಲ್ಲಿಸಿರುವುದು ಬಳಗದ ಎಲ್ಲ ಸದಸ್ಯರ ಅಭಿಮಾನಕ್ಕೆ ಕಾರಣವಾಗಿದೆ. ಬಳಗದ ವತಿಯಿಂದ ಜನರಲ್ಲಿ ಓದಿನ ಹವ್ಯಾಸವನ್ನು ಮೂಡಿಸುವುದಕ್ಕಾಗಿ ಬೀಚಿಯವರ ಪುಸ್ತಕಗಳನ್ನು ಮನೆಮನೆಗೆ ತಲುಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಅಂದಿನ ಕಾಲದಲ್ಲಿ ಶ್ರೀ ಗಳಗನಾಥರು ಕನ್ನಡ ಪುಸ್ತಕಗಳನ್ನು ಹೊತ್ತು ಮಾರಿದಂತೆ ಬೀಚಿಯವರ ಪುಸ್ತಕಗಳನ್ನು ಹೊತ್ತುಕೊಂಡು ಓಣಿ ಓಣಿಗಳಲ್ಲಿನ ಪ್ರತಿ ಮನೆಮನೆಗೂ ಅಡ್ಡಾಡಿ ಬೀಚಿ ಬಳಗದ ಸದಸ್ಯರು ಪುಸ್ತಕಗಳನ್ನು ಮಾರಿದರು.

ಓದಿನಲ್ಲಿ ಸಾಧನೆ ಮಾಡಿದ ಶಾಲೆಯ ಮಕ್ಕಳಿಗೂ ಬೀಚಿ ಬಳಗ ತನ್ನ ಗೌರವದ ಹಸ್ತವನ್ನು ಚಾಚಿದೆ. ಹೀಗೆ ಕಳೆದ ಹತ್ತು ವರ್ಷಗಳಿಂದ ತನ್ನದೇ ಆದ ರಾಜ ಮಾರ್ಗದಲ್ಲಿ ನಡೆದು ಬರುತ್ತಿರುವ 'ನರೇಗಲ್ಲದ ಬೀಚಿ ಬಳಗ' ಈ ನಾಡಿನೆಲ್ಲೆಡೆ ಸದ್ದು ಮಾಡುತ್ತಿರುವುದು ಸುಳ್ಳೇನಲ್ಲ. ಪರಸ್ಥಳದ ಅನೇಕ ಸಾಹಿತ್ಯಾಸಕ್ತರೂ ಸಹ ಈ ಬಳಗದ ಸದಸ್ಯರಾಗಲು ಹಾತೊರೆಯುತ್ತಿರುವುದು ಬಳಗದ ಜನಪ್ರಿಯತೆಗೆ ಸಾಕ್ಷಿ. ಇಂತಹ ಬಳಗವು ಡಿಸೆಂಬರ್ 10ರಂದು ನರೇಗಲ್ಲದ ಹಿರೇಮಠದ ಸಭಾ ಭವನದಲ್ಲಿ ಅದ್ದೂರಿಯಾದ ದಶಮಾನೋತ್ಸವದ 'ದಶಮಾನ ಸಂಭ್ರಮ'ವನ್ನು ಆಚರಿಸುತ್ತಿದೆ. ಅದಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಅದ್ದೂರಿ ಸಮಾರಂಭಕ್ಕೆ ನೀವೂ ಬನ್ನಿ, ನಿಮ್ಮವರನ್ನೂ ಕರೆತನ್ನಿ.

ಬೀಚಿ ಬಳ್ಳಾರಿ ಜಿಲ್ಲೆಗೆ ಸೇರಿದವರು. ಹರಪನಹಳ್ಳಿಯ ಅವರ ಸೋದರತ್ತೆ ರಿಂದವ್ವಳ ಆಶ್ರಯದಲ್ಲಿ ಬೆಳೆದವರು. ತಂದೆ-ತಾಯಿಯರನ್ನು ಬಹು ಬೇಗನೆ ಕಳೆದುಕೊಂಡಿದ್ದ ಬೀಚಿ ಓಣಿಯ ಕೂಸಾಗಿ ಬೆಳೆದು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದ್ದಲ್ಲದೆ 'ಹಾಸ್ಯಬ್ರಹ್ಮ' ಎಂಬ ಗೌರವವನ್ನೂ ಸಂಪಾದಿಸಿಕೊಂಡವರು. ಅವರ ಹಾಸ್ಯ ಎಂದಿಗೂ ಅಪಹಾಸ್ಯವಾಗದೆ, ಯಾರನ್ನೂ ನೋಯಿಸದ, ಸಂದೇಶವನ್ನು ನೀಡುವ ಹಾಸ್ಯವಾಗಿರುತ್ತಿತ್ತು. ಅವರ ಪುಸ್ತಕಗಳನ್ನು ಓದಿದ ಯಾರಿಗಾದರೂ ಬೀಚಿ ಎಂತಹ ಅದಮ್ಯ ಶಕ್ತಿಯುಳ್ಳ ಮಾನವೀಯತೆಯ ಮನುಷ್ಯ ಎಂಬುದರ ಅರಿವಾಗುತ್ತದೆ. ಇಂತಹ ಬೀಚಿ ಬಳಗದಿಂದ ದೊರೆತ ಈ ಸನ್ಮಾನ ನಿಜಕ್ಕೂ ಅವಿಸ್ಮರಣೀಯ. ಇಡೀ ಕರ್ನಾಟಕದಲ್ಲಿ ಎಲ್ಲಿಯೂ ಇಲ್ಲದ ಬೀಚಿ ಬಳಗವು ರಾಜ್ಯದ ಸಣ್ಣ ಪಟ್ಟಣವಾದ ನರೇಗಲ್ಲದಲ್ಲಿ ಜನನ ತಾಳಿರುವುದು ನಮಗೆ ಅತ್ಯಂತ ಹೆಮ್ಮೆಯ ವಿಷಯ.

**- ಅರುಣ ಬಿ.ಕುಲಕರ್ಣಿ. ಕೋಡಿಕೊಪ್ಪ.**

# ಅನುದಾನರಹಿತ ಖಾಸಗಿ ಶಾಲೆಗಳ ಬೇಡಿಕೆ ಈಡೇರಿಸಿ




**■ ವಿಜಯಸಾಕ್ಷಿ ಸುದ್ದಿ, ಗದಗ**

ಸರಕಾರ ಖಾಸಗಿ ಅನುದಾನಿತ ಶಾಲೆಗಳ ಬೇಡಿಕೆ ಈಡೇರಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವದು ಎಂದು ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಶಾಲೆಗಳ ಸಂಘ (ರುಪ್ಸಾ)ದ ರಾಜ್ಯ ಪ್ರದಾನ ಕಾರ್ಯದರ್ಶಿ ಶಶಿಧರ ದಿಂಡೂರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸರಕಾರ ಹೈಕೋರ್ಟ್ ಆದೇಶದಂತೆ ಖಾಸಗಿ ಶಾಲೆಗಳ ಮಾನ್ಯತೆ ನವೀಕರಣವನ್ನು 10 ವರ್ಷಕ್ಕೆ ವಿಸ್ತರಿಸಬೇಕು, 2018ರ ಮುಂಚೆ ಪ್ರಾರಂಭವಾದ ಶಿಕ್ಷಣ ಸಂಸ್ಥೆಗಳಿಗೆ ಫೈರ್ ಸೇಫ್ಟಿ, ಬಿಲ್ಡಿಂಗ್ ಸೇಫ್ಟಿಯಿಂದ ಕೋರ್ಟ್ ಆದೇಶದಂತೆ ವಿನಾಯಿತಿ ನೀಡಬೇಕು, ಆರ್‌ಟಿಇ ಮರುಪಾವತಿ ಹಣವನ್ನು ಕನಿಷ್ಟ 35 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು, ರಾಷ್ಟ್ರೀಯ ಶಿಕ್ಷಣ ನೀತಿ-2020 ಕಡ್ಡಾಯವಾಗಿ ಕರ್ನಾಟಕದಲ್ಲಿ ಅನುಷ್ಠಾನವಾಗಬೇಕು, ಸ್ಟೇಟ್ ಎಜುಕೇಶನ್ ಪಾಲಿಸಿಯ ಅನುಷ್ಠಾನ ಕೈ ಬಿಡಬೇಕು, 1995ರಿಂದ 2010ರವರೆಗೆ ಪ್ರಾರಂಭವಾದ ಖಾಸಗಿ, ಅನುದಾನ ರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು ಹಾಗೂ ಈ ಮೊದಲು ಜಾರಿಯಲ್ಲಿದ್ದ ಆರ್‌ಟಿಇ ಕಾರ್ಯಕ್ರಮವನ್ನು ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಮರು ಅನುಷ್ಠಾನಗೊಳಿಸುವಂತೆ ಅಗ್ರಹಿಸಿ ಡಿ. 11ರಂದು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ರುಪ್ಸಾದಿಂದ ಮನವಿ ಸಲ್ಲಿಸಲಾಗುವುದು. ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವುದು ಎಂದರು.


ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಜಯದೇವ ಮೆಣಸಗಿ, ಕಾರ್ಯದರ್ಶಿ ಎಂ.ಎಂ. ಡಾಲಾಯತ ಹಾಗೂ ಪದಾಧಿಕಾರಿಗಳಾದ ಬಿ.ಡಿ. ಹರ್ತಿ, ಎಚ್.ಎನ್. ಗದಗ, ಮಲ್ಲಿಕಾರ್ಜುನಗೌಡ ಗೊಡಚಪ್ಪನವರ ಮುಂತಾದವರು ಉಪಸ್ಥಿತರಿದ್ದರು.

### ಬರೆದಂತೆ ಬದುಕಿದ ಕಾರಂತಜ್ಜನಿಗೊಂದು ನುಡಿ ನಮನ

# ಕನ್ನಡತನದ ಆಯಸ್ಕಾಂತ-ಶಿವರಾಮ ಕಾರಂತ

ಕಡಲ ತೀರದ ಭಾರ್ಗವ ಎಂದು ಪ್ರಖ್ಯಾತಿಯನ್ನು ಪಡೆದ ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬಲ್ಲಿ 1902ರ ಅಕ್ಟೋಬರ್ 10ರಂದು ಜನಿಸಿದರು. ಇವರ ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ ಕಾರಂತರು. 9 ಮಕ್ಕಳ ಕುಟುಂಬದಲ್ಲಿ ಶಿವರಾಮ ಕಾರಂತರು 4ನೇ ಮಗ. ಇಂಗ್ಲೀಷರನ್ನು ಕಂಡರೆ ಅಸಹ್ಯ ಪಡುತಿದ್ದ ಕಾಲದಲ್ಲಿ ಶಿವರಾಮ ಕಾರಂತರ ತಂದೆ ಶೇಷ ಕಾರಂತರು ಅವರ ಮಕ್ಕಳನ್ನು ಇಂಗ್ಲೀಷ್ ಶಾಲೆಗೆ ಕಳುಹಿಸಿದರು. ಕುಂದಾಪುರದ ಶಾಲೆಯಲ್ಲಿ 1920ರಲ್ಲಿ ಶಿವರಾಮ ಕಾರಂತರು ತಮ್ಮ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಬರೆದು ಮುಗಿಸಿದರು.

ತಮ್ಮ ಶಾಲೆಯಲ್ಲಿ ರಂಗರಾಯರು ಕಾರಂತರ ಮೊದಲ ಗುರುಗಳಾಗಿ ಕಾರಂತರಿಗೆ ಬೆಂಬಲ ನೀಡಿದರು. ಮುದ್ದಣ ಕವಿಯ ಗುರುವಾಗಿದ್ದ ಮಳಲಿ ಸುಬ್ಬರಾಯರು ಸಹ ಶಿವರಾಮ ಕಾರಂತರಿಗೆ ಗುರುವಾಗಿದ್ದರು. ಮಳಲಿ ಸುಬ್ಬರಾಯರು ಮೂಲತಃ ಯಕ್ಷಗಾನ ರಚನೆ ಮಾಡಬಲ್ಲವರಾಗಿದ್ದು ಯಕ್ಷಗಾನದ ಬಗ್ಗೆ ಶಿವರಾಮರಿಗೆ ಆಸಕ್ತಿ ಮೂಡಲು ಮುಖ್ಯ ಕಾರಣರಾದರು. ಆಧುನಿಕ ವಿದ್ಯಾಭ್ಯಾಸ ಕೇವಲ ಹೊಟ್ಟೆಪಾಡಿಗಾಗಿ



ಎನ್ನುವುದು ಅವರ ಅಭಿಪ್ರಾಯ. ನಿಜವಾದ ವ್ಯಕ್ತಿತ್ವದ ವಿಕಸನವಾದರೆ ಅದೇ ಶಿಕ್ಷಣವೆನ್ನುವುದು ಕಾರಂತರ ಅಭಿಪ್ರಾಯವಾಗಿತ್ತು.

1920ರಲ್ಲಿ ಗಾಂಧೀಜಿಯವರು ಸ್ವತಂತ್ರ ಹೋರಾಟದಲ್ಲಿ ಶಾಲಾ ಮಕ್ಕಳು ಭಾಗವಹಿಸಬೇಕೆಂದು ಕರೆಕೊಟ್ಟಾಗ ಕಾರಂತರೂ ಚಳವಳಿಯಲ್ಲಿ ಭಾಗವಹಿಸಿದ್ದರು. ಯುವಕರಾಗಿದ್ದಾಗ, ಸಮಾಜ ಸುಧಾರಣೆಗೂ ಕೈ ಹಾಕಿದರು. ಯಕ್ಷಗಾನ ತಂಡಗಳನ್ನು ಕಟ್ಟಿಕೊಂಡು ದೇಶ-ವಿದೇಶಗಳಲ್ಲಿ ಈ ಕಲೆಯನ್ನು ಪ್ರಚುರಪಡಿಸಲು ಯತ್ನಿಸಿದರು. ಮಕ್ಕಳಲ್ಲಿದ್ದ ಪ್ರತಿಭೆ ಅರಳಿಸಲು ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಬಾಲವನ ಎಂಬ ಅಸಂಪ್ರದಾಯಿಕ ಶೈಕ್ಷಣಿಕ ಕೇಂದ್ರವನ್ನು ತೆರೆದಿದ್ದರು. ಪುತ್ತೂರಿನಲ್ಲಿ ಒಂದು ಮುದ್ರಣಾಲಯ ತೆರೆದು, ತಮ್ಮ ಪುಸ್ತಕಗಳನ್ನು ಮುದ್ರಿಸುತ್ತಿದ್ದರಲ್ಲದೆ ತಮ್ಮ ಹಲವು ಕಾದಂಬರಿಗಳಿಗೆ ತಾವೇ ಮುಖಪುಟದ ಚಿತ್ರಗಳನ್ನೂ ಬರೆದು ಮುದ್ರಿಸಿದ ಬಹುಮುಖ ಪ್ರತಿಭೆ ಇವರದ್ದು.

1925 ರಲ್ಲಿ 'ವಸಂತ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿದ ಕಾರಂತರು ಅದರ ಸಂಪಾದಕರಾಗಿ ಸುಮಾರು ಐದು ವರ್ಷಗಳ ಕಾಲ ದುಡಿದರು. ಕಾರಂತರ ಮೊದಲ ಕಾದಂಬರಿ 'ವಿಚಿತ್ರ ಕೂಟ' ಇದೇ ಪತ್ರಿಕೆಯ ಮೂಲಕ ಬೆಳಕು ಕಂಡಿತು. ನಂತರ ಕಾರಣಾಂತರಗಳಿಂದ 1930ರಲ್ಲಿ ಈ ಪತ್ರಿಕೆ ನಿಂತು ಹೋಯಿತು. ಮಕ್ಕಳ ಶಿಕ್ಷಣದಲ್ಲಿ ಕಾರಂತರಿಗೆ ತುಂಬಾ ಆಸಕ್ತಿ. ಮಕ್ಕಳಿಗಾಗಿ ಸಾಹಿತ್ಯರಚನೆ ಮಾಡಿದ ಅವರು ಮಕ್ಕಳ ಪ್ರೀತಿಯ ಕಾರಂತಜ್ಜ ಎಂದೇ ಖ್ಯಾತರಾದರು. ವಿಜ್ಞಾನದ ಅನೇಕ ಮುಖಗಳನ್ನು ಮಕ್ಕಳಿಗೆ ಪರಿಚಯಿಸಲು ಅವರು ಬರೆದ ಅದ್ಭುತ ಜಗತ್ತು, ಬಾಲ ಪ್ರಪಂಚ ಕನ್ನಡದ ಮಟ್ಟಿಗೆ ಅದ್ಭುತ ಏಕವ್ಯಕ್ತಿ ಜ್ಞಾನಕೋಶ.

ಬರೋಬ್ಬರಿ 98 ವರ್ಷಗಳ ಕಾಲ ಬದುಕಿದ್ದ ಕಾರಂತರು, ತಮ್ಮ 96ನೇ ವಯಸ್ಸಿನಲ್ಲೂ ಹಕ್ಕಿಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದು, ಇದು ವಿಶ್ವ ದಾಖಲೆಗೆ ಅರ್ಹವಾಗಿರುವ ಒಂದು ಸಾಧನೆ ಎನ್ನಬಹುದು. 1955ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1958 ಸ್ವೀಡನ್‌ನ 'ಲಾ ಅರ್ಕೈವ್ ಇಂಟರ್‌ನ್ಯಾಷನಲ್' ಸಂಸ್ಥೆಯು ಕಾರಂತರು ಯಕ್ಷಗಾನಕ್ಕಾಗಿ ಮಾಡಿದ ಸೇವೆಗಾಗಿ ಕಂಚಿನ ಪದಕ ನೀಡಿ ಗೌರವ, 1959ರಲ್ಲಿ ಯಕ್ಷಗಾನ ಬಯಲಾಟ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1975ರಲ್ಲಿ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ, 1978ರಲ್ಲಿ ಮೂಕಜ್ಜಿಯ ಕನಸುಗಳು ಕೃತಿಗೆ ಜ್ಞಾನಪೀಠ ಪ್ರಶಸ್ತಿ, 1989ರಲ್ಲಿ 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಗೆ ಪಂಪ ಪ್ರಶಸ್ತಿ, ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟ-ರೇಟ್ ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿಗಳೂ ಅರಸಿ ಬಂದಿವೆ. ಅರ್ಥಪೂರ್ಣ ಬದುಕು ಕಳೆದ ಸಾಹಿತ್ಯ ದಿಗ್ಗಜ ಡಾ. ಶಿವರಾಮಕಾರಂತರು 1997, ಡಿಸೆಂಬರ್ 9ರಂದು ನಿಧನ ಹೊಂದಿದರು.



**- ಈಶ್ವರ ಎಸ್.ಮೆಡ್ಲೇರಿ. ಅಧ್ಯಕ್ಷರು, ಕಸಾಪ-ಲಕ್ಷ್ಮೇಶ್ವರ.**

### ಹೆಬ್ಬಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್‌ಗಳೇ ವೈದ್ಯರು

# ಅಗತ್ಯ ಚಿಕಿತ್ಸೆ ಗಗನ ಕುಸುಮ

**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿ ಮೀಸಲು ಮತಕ್ಷೇತ್ರದ ತುದಿಯಂಚಿನಲ್ಲಿ ಬರುವ, ಜಿಲ್ಲಾ ಪಂಚಾಯಿತಿ ಕ್ಷೇತ್ರವಾಗಿ ಗುರುತಿಸಿಕೊಂಡಿರುವ ಹೆಬ್ಬಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಲವು ತಿಂಗಳುಗಳಿಂದ ಸಮರ್ಪಕ ವೈದ್ಯರು ಇಲ್ಲದೇ ಇರುವುದರಿಂದ ಸದ್ಯ ಈ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್‌ಗಳೇ ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ.

ಹೆಬ್ಬಾಳ ಗ್ರಾಮವು ಸುಮಾರು 6 ಸಾವಿರಕ್ಕೂ ಅಧಿಕ ಜನಸಂಖ್ಯೆಯನ್ನು ಹೊಂದಿದ್ದು, ಜಿ.ಪಂ ಹಾಗೂ ತಾ.ಪಂ ಕ್ಷೇತ್ರದ ಜೊತೆಗೆ ಗ್ರಾಮ ಪಂಚಾಯಿತಿಯ ಕೇಂದ್ರಸ್ಥಾನವೂ ಇದಾಗಿದೆ. ಸುತ್ತಮುತ್ತಲಿನ 20-25 ಹಳ್ಳಿಗಳ ಒಡನಾಟವಿದ್ದು, ಈ ಭಾಗದ ಸಾರ್ವಜನಿಕರಿಗೆ ವರವಾಗಬೇಕಿದ್ದ ಈ ಪ್ರಾಥಮಿಕ ಆರೋಗ್ಯ ಕೇಂದ್ರ ಸಮರ್ಪಕ ವೈದ್ಯರಿಲ್ಲದೇ ಕೇವಲ ಹೆಸರಿಗಷ್ಟೇ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ




ಕಾರ್ಯ ನಿರ್ವಹಿಸುತ್ತಿರುವುದು ಈ ಭಾಗದ ಜನತೆಯ ಅಸಮಾಧಾನಕ್ಕೆ ಕಾರಣವಾಗಿದೆ. ಪ್ರಸ್ತುತ ಇಬ್ಬರು ಸ್ಟಾಫ್ ನರ್ಸ್, ಓರ್ವ ಲ್ಯಾಬ್ ಟೆಕ್ನಿಶಿಯನ್, 1 ಫಾರ್ಮಾಸಿಸ್ಟ್, 1 ಅಟೆಂಡರ್‌ಗಳಿಂದ ಪಿಎಚ್‌ಸಿ ನಿರ್ವಹಣೆಯಾಗುತ್ತಿದೆ. ಇರುವ ಅಂಬ್ಯುಲೆನ್ಸ್ ಕೂಡ ದುರಸ್ತಿಗೆ ತೆರಳಿದೆ.

ಕೇಂದ್ರದಲ್ಲಿ 24*7 ಹೆರಿಗೆ ಸೌಲಭ್ಯ ಕಲ್ಪಿಸುವುದಾಗಿ ಬೃಹತ್ ಘೋಷಣೆಯ ಫಲಕವನ್ನು ಅಳವಡಿಸಲಾಗಿದ್ದು, ಇಲ್ಲಿ ವೈದ್ಯರೇ ಇಲ್ಲದಿದ್ದರೆ ಹೆರಿಗೆ ಸೌಲಭ್ಯ ಹೇಗೆ ಸಾಧ್ಯ? ಇದು ಕೇವಲ ಹೆಸರಿಗಷ್ಟೇ ಘೋಷಣೆ ಎಂಬಂತಾಗಿದೆ. ಅನೇಕ ಸಂದರ್ಭಗಳಲ್ಲಿ ಈ ಭಾಗದ ಗರ್ಭಿಣಿಯರು, ಮಕ್ಕಳು, ವಯೋವೃದ್ಧರಿಗೆ ಇಲ್ಲಿ ಸಕಾಲದಲ್ಲಿ ಚಿಕಿತ್ಸೆ ಗಗನ ಕುಸುಮವಾಗಿದ್ದು, ಇರುವ ಸ್ಟಾಫ್ ನರ್ಸ್‌ಗಳು ತಮ್ಮ ವ್ಯಾಪ್ತಿಯಲ್ಲಿ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಸಂಪೂರ್ಣ ಚಿಕಿತ್ಸೆ ಬೇಕಾದಲ್ಲಿ ರೋಗಿಗಳು ಬೆಳ್ಳಟ್ಟಿ ಇಲ್ಲವೇ ಶಿರಹಟ್ಟಿಯ ತಾಲೂಕಾ ಆಸ್ಪತ್ರೆಗೆ ದೌಡಾಯಿಸುವುದು ಅನಿವಾರ್ಯವಾಗಿದೆ.

ಸಾರ್ವಜನಿಕರಿಗೆ ಮೂಲ ಸೌಲಭ್ಯಗಳಲ್ಲಿ ಒಂದಾದ ಆರೋಗ್ಯ ಸೇವೆ ಕಲ್ಪಿಸುವುದು ಅವಶ್ಯವಿದ್ದು, ಈ ಭಾಗದ ಸುತ್ತಮುತ್ತಲಿನ ಗ್ರಾಮಗಳ ಜನತೆಯ ಆರೋಗ್ಯವನ್ನು ಕಾಪಾಡುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಶೀಘ್ರವೇ ವೈದ್ಯರ ನೇಮಕ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕೆಂಬುದು ಗ್ರಾಮಸ್ಥರ ಬೇಡಿಕೆ.

ಈ ಕುರಿತು ಪ್ರತಿಕ್ರಿಯಿಸಿದ ತಾಲೂಕಾ ಆರೋಗ್ಯಾಧಿಕಾರಿ ಡಾ. ಸುಭಾಸ್ ದೈಗೊಂಡ, ಮುಂಬರುವ ದಿನಗಳಲ್ಲಿ ಖಾಲಿಯಿರುವ ಹುದ್ದೆಗೆ ಬೇರೆ ವೈದ್ಯರನ್ನು ನಿಯೋಜನೆ ಮಾಡಲಾಗುವುದು ಎಂದಿದ್ದಾರೆ.

ಈ ಕುರಿತು ತಾ.ಪಂ ಮಾಜಿ ಅಧ್ಯಕ್ಷ ಶಿವನಗೌಡ ಕಂಠೀಗೌಡ್ರ, ಕನಕವಾಡ ಗ್ರಾಮದ ವೀರೇಶರೆಡ್ಡಿ ಕಾಮರೆಡ್ಡಿ ಪ್ರತಿಕ್ರಿಯಿಸಿ, 24*7 ಹೆರಿಗೆ ಸೌಲಭ್ಯವುಳ್ಳ ಕೇಂದ್ರ ಇದಾಗಿದ್ದು, ವೈದ್ಯರಿಲ್ಲದೇ ಬೇರೆ ಕಡೆಗೆ ತೆರಳಿ ಚಿಕಿತ್ಸೆ ಪಡೆಯಬೇಕಾದ ಅನಿವಾರ್ಯತೆಯಿದೆ. ಆದ್ದರಿಂದ 20ಕ್ಕೂ ಹೆಚ್ಚು ಗ್ರಾಮಗಳ ಜನತೆಗೆ ಅನುಕೂಲವಾಗುವ ಈ ಕೇಂದ್ರಕ್ಕೆ ಶೀಘ್ರವೇ ವೈದ್ಯರನ್ನು ನಿಯೋಜನೆ ಮಾಡಬೇಕೆಂದು ಆಗ್ರಹಿಸಿದರು.

# ರೈಲ್ವೆ ಯೂನಿಯನ್ 19ನೇ ವಾರ್ಷಿಕ ಮಹಾ ಅಧಿವೇಶನ




**■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್ ವತಿಯಿಂದ ಬೆಂಗಳೂರಿನಲ್ಲಿ 19ನೇ ವಾರ್ಷಿಕ ಅಧಿವೇಶನದ ಬಹಿರಂಗ ಸಾಮಾನ್ಯ ಸಭೆ ಅದ್ದೂರಿಯಾಗಿ ಜರುಗಿತು.

ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್ ಹುಬ್ಬಳ್ಳಿ ವಿಭಾಗದ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಆರ್. ಕುಮಾರವೇಲನ, ಅಧ್ಯಕ್ಷ ಜಾಕೀರ್ ಸನದಿ ಅವರ ನೇತೃತ್ವದಲ್ಲಿ ನೂರಾರು ರೈಲ್ವೆ ನೌಕರರು ಪಾಲ್ಗೊಂಡಿದ್ದರು. ಈ ಬಹಿರಂಗ ಸಭೆಯ ಮುಖ್ಯ ಉದ್ದೇಶ ಹಳೆಯ ಪಿಂಚಣಿ, ರೈಲ್ವೆಯಲ್ಲಿನ ಖಾಸಗೀಕರಣ ನಿಷೇಧ, ಕೋವಿಡ್ ಸಮಯದಲ್ಲಿನ 18 ತಿಂಗಳ ತುಟ್ಟಿ ಭತ್ಯೆ ಬಾಕಿ ಹಣ ಬಿಡುಗಡೆ, ಟ್ರ್ಯಾಕ್ ಮೆಂಟೆನೀಯರ್ಸ್ ಹುದ್ದೆಗಳ ಹೆಚ್ಚಳ, ರೈಲ್ವೆ ಚಾಲಕರ ಹುದ್ದೆಗಳ ಮೇಲ್ದರ್ಜೆಗೆ ಹೆಚ್ಚಿಸುವುದು ಸೇರಿದಂತೆ ಪ್ರಮುಖ ಬೇಡಿಕೆಗಳ ಒತ್ತಾಯವಾಗಿತ್ತು.

ಈ ಸಭೆಯಲ್ಲಿ ಯೂನಿಯನ್‌ನ ಹುಬ್ಬಳ್ಳಿ ವಿಭಾಗದ ಸತೀಶ್, ಎಂಜಿನಿಯರಿಂಗ್ ವಿಭಾಗದ ಪ್ರಧಾನ ಕಾರ್ಯದರ್ಶಿ ಜಾವೇರ್ ಸಾಮುಯಲ್ಸ್, ಅಧ್ಯಕ್ಷ ಡಿ.ಚಾರ್ಲೀ, ಖಜಾಂಚಿ ಜಿ.ಎಂ. ಕುಲಕರ್ಣಿ, ಜೀಲಾನಿ ಅತ್ತಾರ, ಸದಸ್ಯರಾದ ಕೆ. ಯೇಸುಕುಮಾರ್, ಜಗದೀಶ್ ಭಜಂತ್ರಿ, ನವೀನಕುಮಾರ, ಬಸವರಾಜ, ಮಹೇಶ್ ಇಡ್ಲಿ, ರಂಗನಾಥ ಜಾಡರ ಸೇರಿದಂತೆ ನೂರಾರು ಕಾರ್ಮಿಕ ನೌಕರರು ಪಾಲ್ಗೊಂಡಿದ್ದರು.

# 2047ರೊಳಗೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರ

ಮೊದಲನೇ ಪುಟದಿಂದ

ಉಜ್ವಲ್ ಯೋಜನೆ, ಪೋಷಣ ಅಭಿಯಾನ, ಸ್ವ-ಸಹಾಯ ಗುಂಪುಗಳಿಗೆ ಸಾಲ ಮಂಜೂರಾತಿ, ಆಯುಷ್ಮಾನ್ ಭಾರತ, ಕಿಸಾನ್ ಕ್ರೆಡಿಟ್ ಕಾರ್ಡ್, ಮುದ್ರಾ, ಸ್ವನಿಧಿ, ಕಿಸಾನ್ ಸಮ್ಮಾನ ಮತ್ತು ಪ್ರಧಾನ ಮಂತ್ರಿಯವರ ಆವಾಸ್ ಯೋಜನೆ ಸೇರಿದಂತೆ ಹಲವಾರು ಜನಪರ ಯೋಜನೆಗಳ ಲಾಭ ಪಡೆದುಕೊಂಡ ನೂರಕ್ಕೂ ಅಧಿಕ ಸಂಖ್ಯೆಯ ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆರೋಗ್ಯ ಇಲಾಖೆಯಿಂದ ಆರೋಗ್ಯ ತಪಾಸಣೆ ನಡೆಸಲಾಯಿತು. ಸಂಕೇತ ತಂಡದವರು ಡ್ರೋನ್ ಪ್ರದರ್ಶನ ನೀಡಿದರು.

ಶಾಸಕರಾದ ಎಂ.ಆರ್. ಪಾಟೀಲ, ಮಹೇಶ ಟೆಂಗಿನಕಾಯಿ, ವಿ.ಪ ಸದಸ್ಯರಾದ ಎಸ್.ವಿ.ಸಂಕನೂರ, ಕೇಂದ್ರ ವಾರ್ತಾ ಶಾಖೆಯ ಹೆಚ್ಚುವರಿ ಮಹಾ ನಿರ್ದೇಶಕ ಎಸ್.ಜಿ. ರವೀಂದ್ರ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನ ಅಧ್ಯಕ್ಷ ಶ್ರೀಕಾಂತ ಭಂಡಿವಾಡ, ಬ್ಯಾಂಕ್ ಆಫ್ ಬರೋಡಾ ವ್ಯವಸ್ಥಾಪಕ ವಡ್ಡೆ ಶ್ರೀಹರಿ, ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ಪ್ರಭುದೇವ, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ಹಿರೇಮಠ, ವರೂರ ಗ್ರಾ.ಪಂ ಅಧ್ಯಕ್ಷೆ ಲಕ್ಷ್ಮವ್ವ ಮ್ಯಾಗಡಿ, ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಪಾಲ್ಗೊಂಡಿದ್ದರು.

## ಹುಬ್ಬಳ್ಳಿ: ಬ್ಯಾಂಕ್ ಸಿಬ್ಬಂದಿ ನಿರ್ಲಕ್ಷ್ಯ; ಸೇಫ್ಟಿ ಲಾಕರ್‌ನಲ್ಲಿಟ್ಟಿದ್ದ 56 ಲಕ್ಷ ಮೌಲ್ಯದ ಚಿನ್ನಾಭರಣ ನಾಪತ್ತೆ!

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಬ್ಯಾಂಕ್ ಲಾಕರ್‌ನಲ್ಲಿ ಭದ್ರವಾಗಿ ಇರಿಸಿದ್ದ ಚಿನ್ನಾಭರಣ ನಾಪತ್ತೆಯಾಗಿದೆ ಎಂದು ಆರೋಪಿಸಿದ ಹುಬ್ಬಳ್ಳಿಯ ಶಾಂತಿ ನಗರದ ನಿವಾಸಿ ಈಶ್ ಕೊಪ್ಲಿ ಎಂಬವರು ಕೇಶ್ವಾಪೂರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈಶ್ ಕೊಪ್ಲಿ ಕೇಶ್ವಾಪೂರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಬ್ಯಾಂಕ್‌ನ ಲಾಕರ್‌ನಲ್ಲಿ ಸುಮಾರು 56 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಇಟ್ಟಿದ್ದರು. ಲಾಕರ್ ಓಪನ್ ಮಾಡುವ ಕೀಲಿ ಈಶ್ ಅವರ ಕೈಯಲ್ಲಿದ್ದರೂ ಲಾಕರ್ ಓಪನ್ ಆಗಿದ್ದು, ಲಕ್ಷಾಂತರ ಮೌಲ್ಯದ ಚಿನ್ನಾಭರಣ ಹಾಗೂ ದಾಖಲೆಗಳು ಕಳುವಾಗಿವೆ ಎಂದು ಅವರು ದೂರಿದ್ದಾರೆ. ಕೇಶ್ವಾಪೂರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಲಿಂಗಾಯತ ಪ್ರಗತಿಶೀಲ ಸಂಘದ ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಎಲ್ಲರಿಗೂ ಲೇಸನ್ನು ಬಯಸುವವರೇ ಶ್ರೇಷ್ಠರು

■ವಿಜಯಸಾಕ್ಷಿ ಸುದ್ದಿ, ಗದಗ

ಶರಣರು, ಸಂತರು, ದಾಸರು ಅತ್ಯಂತ ಪವಿತ್ರವಾಗಿರುವ ಜೀವನವನ್ನು ನಡೆಸಿ ತಮ್ಮ ಬದುಕಿನಿಂದ ವಿಶಿಷ್ಟವಾದ ಸಂದೇಶವನ್ನು ನೀಡಿದ್ದಾರೆ. ಮಹಾತ್ಮರಲ್ಲಿ, ಶರಣರಲ್ಲಿ, ಸಂತರಲ್ಲಿ ಯಾವುದೇ ಜಾತಿಯನ್ನು ಗುರುತಿಸಬಾರದು. ಅವರಲ್ಲಿರುವ ಜ್ಞಾನ ಬಹಳ ಮುಖ್ಯ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ತಿಳಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2670ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಸಮಾಜದಲ್ಲಿ ಆ ಜಾತಿ ಶ್ರೇಷ್ಠ, ಈ ಜಾತಿ ಶ್ರೇಷ್ಠ ಎಂದು ನಿರಂತರ ಹೋರಾಟಗಳು ನಡೆಯುತ್ತಿವೆ. ಶರಣರ, ಮಹಾತ್ಮರ ದೃಷ್ಟಿಯಲ್ಲಿ ಯಾರು ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಾರೆಯೋ ಅವರೇ ಶ್ರೇಷ್ಠ ಜಾತಿಯವರು. ನಾವು ಶ್ರೇಷ್ಠರು ಎನಿಸಿಕೊಳ್ಳಬೇಕಾದರೆ ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕಾಗುತ್ತದೆ. ಶರಣರು ತಮ್ಮ ವಚನಗಳ ಮೂಲಕ ಮಾನವೀಯ ಮೌಲ್ಯಗಳನ್ನು ಪ್ರಸಾರ ಮಾಡಿದರು. ದಾಸರು ಮತ್ತು ಶರಣರ ಮೂಲ ಉದ್ದೇಶ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸಲು ಆತ್ಮಬೋಧೆಯನ್ನು ಮಾಡುವುದಾಗಿದೆ ಎಂದರು.



ಸಮ್ಮುಖವನ್ನು ವಹಿಸಿದ್ದ ಪೂಜ್ಯ ಶ್ರೀ ಮ.ನಿ.ಪ್ರ. ಗುರುಬಸವಲಿಂಗ ಮಹಾಸ್ವಾಮಿಗಳು, ಶ್ರೀ ಜಗದ್ಗುರು ದುರದುಂಡೀಶ್ವರ ಸಿದ್ಧಸಂಸ್ಥಾನಮಠದ ಪುಣ್ಯಾರಣ್ಯ ಅರಭಾವಿಮಠ-ಮೂಡಲಗಿ ಅವರು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಫಕೀರಪ್ಪ ಹೆಬಸೂರ ಪಾಲ್ಗೊಂಡಿದ್ದರು. ರಾಷ್ಟ್ರೀಯ ವೈದ್ಯಕೀಯ ಓಲಂಪಿಕ್ ಕ್ರೀಡಾಕೂಟದಲ್ಲಿ ಬಂಗಾರದ ಪದಕ ಪಡೆದ ನಿಮಿತ್ತ ಡಾ. ಜಿ.ಬಿ. ಬಿಡಿನಹಾಳ, ಅರುಣಾಚಲ ಪ್ರದೇಶದ ಹಿಮಾಲಯನ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ನಿಮಿತ್ತ ಡಾ. ಸಂಜೀವ ಹರಳಯ್ಯ, ಎನ್‌ಪಿಟಿಎಲ್ ಆನ್‌ಲೈನ್ ಸರ್ಟಿಫಿಕೆಟ್ ಕೋರ್ಸ್‌ನಲ್ಲಿ ಪದಕ ಪಡೆದ ನಿಮಿತ್ತ ತೋಂಟ-ದಾರ್ಯ ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಶೈಲಜಾ ಮುದೇನಗುಡಿ, ಪ್ರೊ. ಮುಕ್ತಾ ಪಾಟೀಲ, ಪ್ರೊ. ನೀತಾ ಮುದರಡ್ಡಿ ಅವರನ್ನು ಪೂಜ್ಯರು ಸಂಮಾನಿಸಿದರು.

> ಕನಕದಾಸರ ಜೀವನ ಸಂದೇಶಗಳ ಕುರಿತು ನಿವೃತ್ತ ಡಿವಾಯ್‌ಎಸ್‌ಪಿ ಡಿ.ಡಿ. ಮಾಳಗಿ ಮಾತನಾಡಿ, ತಾತ್ವಿಕವಾಗಿ ಕನಕದಾಸರ ಚಿಂತನೆಗಳ ಬಗ್ಗೆ, ತತ್ತ್ವಸಿದ್ಧಾಂತಗಳ ಬಗ್ಗೆ, ಸಾಹಿತ್ಯದ ಬಗ್ಗೆ, ಸಂಗೀತದ ಬಗ್ಗೆ ವಿಚಾರ ಮಾಡುತ್ತಿಲ್ಲ. ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯದೆ ತ್ರಿಕಾಲಾದಿತವಾಗಿ ನಿಂತ ಸಾಹಿತ್ಯ ಕನಕದಾಸ ಸಾಹಿತ್ಯ. 12ನೇ ಶತಮಾನದಲ್ಲಿ ಶರಣರು ಸಮಾನತೆಯ ಬಂಡಾಯವನ್ನು ಸಾರಿದರೆ, 16ನೇ ಶತಮಾನದಲ್ಲಿ ದಾಸರಲ್ಲಿ ಕನಕದಾಸರೊಬ್ಬರೇ ಬಂಡಾಯ ಸಾರಿದ್ದಾರೆ ಎಂದು ತಿಳಿಸಿದರು.

ಮೃತ್ಯುಂಜಯ ಹಿರೇಮಠ, ಗುರುನಾಥ ಸುತಾರ ಸಂಗಡಿಗರು ವಚನ ಸಂಗೀತ ಹಾಡಿದರು. ಸುಮಾ ಎಸ್. ಸತ್ಯಪ್ಪನವರ ಧರ್ಮಗ್ರಂಥ ಪಠಣಗೈದರು, ಆಕಾಶ ಸಿ.ಸತ್ಯಪ್ಪನವರ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ಹುಚ್ಚಣ್ಣ ರೇವಣೆಪ್ಪ ಶಹಾಪೂರ, ಹಾಲೇಶ್ವರ ಟ್ರೇಡಿಂಗ್ ಕಂ. ದಲಾಲ ವರ್ತಕರು ಹಾಗೂ ಪರಿವಾರ, ಗದಗ ಅವರನ್ನು ಶ್ರೀಗಳು ಸಂಮಾನಿಸಿದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.

ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

# ವಿಕಲಚೇತನರಿಗೆ ಸಾಧನ-ಸಲಕರಣೆ ವಿತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ವಿಸ್ಟಿಯಾನ್ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಸೇವಾ ಜನನಿ ಫೌಂಡೇಶನ್ ಮಾಡಲಗೇರಿ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ರೆಡ್ ಕ್ರಾಸ್ ಭವನದಲ್ಲಿ ವಿಕಲಚೇತನ ಫಲಾನುಭವಿಗಳಿಗೆ ಉಚಿತ ಸಾಧನ-ಸಲಕರಣೆಗಳ ವಿತರಣಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.




ಸಂಸ್ಥೆಯ ನಿರ್ದೇಶಕ ಪ್ರಮೋದ ನಂಜುಂಡಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಕಲಚೇತನರಿಗೆ ಸಾಧನ-ಸಲಕರಣೆ ವಿತರಿಸುವ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶದಲ್ಲಿ ಆಗಬೇಕು. ಇದರಿಂದ ಅವರ ಮುಖದಲ್ಲಿ ನಗೆ ಮೂಡುವಂತಾಗಬೇಕು. ಇವರಿಗೆ ಸಲ್ಲಿಸುವ ಸೇವೆ ನಿಜವಾದ ಸೇವೆಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿಸ್ಟಿಯಾನ್ ಸಂಸ್ಥೆಯ ಡೆಪ್ಯುಟಿ ಮ್ಯಾನೇಜರ್ ಸಿದ್ಧಾರ್ಥ ಬಂಗಾರ ವಿಸ್ಟಿಯಾನ್ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಖ್ಯಾತ ಶಸ್ತ್ರ ಚಿಕಿತ್ಸಕ ಡಾ. ಶೇಖರ್ ಸಜ್ಜನರ್, ಡಾ. ಮಹೇಶ ನಾಲ್ವಾಡ, ಸಂಸ್ಥೆಯ ಅಧ್ಯಕ್ಷ ಜಗದೀಶ ಅಮಾತೆಗೌಡ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಮ್.ಡಿ. ಸಮುದ್ರಿ, ರೆಡ್ ಕ್ರಾಸ್ ಸಭಾಪತಿ ಡಾ. ಆರ್.ಎನ್. ಗೋಡಬೋಲೆ ಮಾತನಾಡಿದರು.

ಸಂಸ್ಥೆಯ ನಿರ್ದೇಶಕ ಮಹಿಪತಿ ದೇಸಾಯಿ, ಮ್ಯಾನೇಜರ್ ರೋಹಿತ್ ಜೋಶಿ, ಡಿಜಿಎಮ್ ಆಯುರ್ವೇದಿಕ್ ಮಹಾವಿದ್ಯಾಲಯದ ಸಂತೋಷ ಬೆಳವಡಿ, ಜಿಲ್ಲಾ ಖಜಾನೆ ಅಧಿಕಾರಿ ಹರಿನಾಥ ಬಾಬು, ಸಿ.ಎ ಮಹೇಶ್ವರಿ ಪಾಟೀಲ ಮಹೇಂದ್ರಿಕರ, ರೆಡ್ ಕ್ರಾಸ್ ಸಂಸ್ಥೆಯ ಉಪ ಸಭಾಪತಿ ನಾರಾಯಣಪ್ಪ ಇಲ್ಲೂರ, ಖಜಾಂಚಿ ಪ್ರೊ. ಕೆ.ಹೆಚ್. ಬೇಲೂರ, ಸದಸ್ಯರಾದ ಗಣೇಶಿಂಗ್ ಬ್ಯಾಳಿ ಉಪಸ್ಥಿತರಿದ್ದರು. 33 ಫಲಾನುಭವಿಗಳಿಗೆ ಪೂರಕ ಸಲಕರಣೆಗಳನ್ನು ವಿತರಿಸಲಾಯಿತು.

ಜಿವಿಪು ಕೇಂದ್ರದ ಸಿಬ್ಬಂದಿಗಳು, ರೋಣ ತಾಲೂಕಿನ ಎಮ್‌ಆರ್‌ಡಬ್ಲ್ಯು ಬಸವರಾಜ ಹೂಲಿ ಹಾಜರಿದ್ದರು. ನಿಶ್ಚಿತಾ ಬಿ.ಎಲ್ ಪ್ರಾರ್ಥಿಸಿದರು. ಪ್ರಕಾಶ ಗಾಣಿಗೇರ ನಿರೂಪಿಸಿದರು. ರುದ್ರಪ್ಪ ಕರಂಡಿ ವಂದಿಸಿದರು.

# ಅಗಲಿದ ಕಲಾವಿದೆ ಲೀಲಾವತಿಯವರಿಗೆ ಶ್ರದ್ಧಾಂಜಲಿ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಮಿಕ ಘಟಕ ವತಿಯಿಂದ ಗದಗ-ಬೆಟಗೇರಿ ಅವಳಿ ನಗರದ ಮುಳಗುಂದ ನಾಕ ವೃತದಲ್ಲಿ ಚಲನಚಿತ್ರ ರಂಗದ ಹಿರಿಯ ನಟಿ, ಬಹುಭಾಷಾ ತಾರೆ ಲೀಲಾವತಿ ಅವರ ಭಾವಚಿತ್ರಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ಮೌನಾಚರಣೆ ಸಲ್ಲಿಸಲಾಯಿತು. ತಾಯಿ ಭುವನೇಶ್ವರಿ ದೇವಿಯು ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸಲಾಯಿತು.

ಈ ಸಂದರ್ಭದಲ್ಲಿ ಯುವ ಘಟಕ ಜಿಲ್ಲಾ ಕಾರ್ಯದರ್ಶಿ ವಿನಾಯಕ ಬದಿ, ಮಹಿಳಾ ಉಪಾಧ್ಯಕ್ಷೆ ಶೋಭಾ ಕಲಾಲ್, ಯುವ ಘಟಕ ಜಿಲ್ಲಾ ಉಪಾಧ್ಯಕ್ಷ ಕುಮಾರ್ ರೇವಣ್ಣವರ್, ಗದಗ ಪ್ರಧಾನ ಕಾರ್ಯದರ್ಶಿ ತೌಶಿಫ್ ಡಾಲಾಯತ್, ಇರ್ಫಾನ್ ತಾಳಿಕೋಟೆ, ನಗರ ಘಟಕದ ಅಧ್ಯಕ್ಷ ದಾವಲ್ ಸಾಬ್ ತಹಶೀಲ್ದಾರ್, ಸಲೀಂ ಸಿರ್ವರ್, ಇಸಾಕ್ ನದಾಫ್, ರೇಷ್ಮಾ, ಅರ್ಚನಾ, ಸಾಧಿಕ್ ಸೇರಿದಂತೆ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

# ರಕ್ತದಾನ ಅತ್ಯಂತ ಶ್ರೇಷ್ಠ: ಸಿ.ಕೆ. ಜಾಲಿ




■ವಿಜಯಸಾಕ್ಷಿ ಸುದ್ದಿ, ಗದಗ

ರಕ್ತದಾನ ಅತ್ಯಂತ ಶ್ರೇಷ್ಠವಾದ ದಾನವಾಗಿದೆ ಎಂದು ಗದಗ-ಬೆಟಗೇರಿ ರೋಟರಿ ಸಂಸ್ಥೆಯ ಅಧ್ಯಕ್ಷ ಸಿ.ಕೆ. ಜಾಲಿ ಹೇಳಿದರು.

ಸಮೀಪದ ಅಡವಿಸೋಮಾಪೂರದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ರೋಟರಿ ಸಂಸ್ಥೆ ಹಾಗೂ ಬಸವೇಶ್ವರ ರಕ್ತ ತಪಾಸಣಾ ಸಂಸ್ಥೆಯ ಸಹಯೋಗದಲ್ಲಿ ಶಾಲಾ ಮಕ್ಕಳ ರಕ್ತದ ಗುಂಪು ವರ್ಗೀಕರಣ ಶಿಬಿರ ಉದ್ಘಾಟಿಸಿ ಮಾತನಾಡಿದರು.

480ಕ್ಕೂ ಹೆಚ್ಚು ಶಾಲಾ ಮಕ್ಕಳ ರಕ್ತದ ಗುಂಪುಗಳನ್ನು ಪರೀಕ್ಷಿಸಿ, ರಕ್ತದ ಗುಂಪಿನ ಪ್ರಮಾಣಪತ್ರವನ್ನು ವಿತರಿಸಲಾಯಿತು. ಶಿವಾಚಾರ್ಯ ಹೊಸಳ್ಳಿಮಠ, ಡಾ.ಉಪ್ಪಿನ, ಅಕ್ಷಯ ಶೆಟ್ಟಿ, ಬಾಲಣ್ಣಾ ಕಾಮತ್, ಸಂತೋಷ ಅಕ್ಕಿ, ಶಾಲಾ ಪ್ರಧಾನ ಗುರು ಎಸ್. ಆರ್. ಮಟ್ಟಿ, ಎ.ಆರ್. ಕಾಮತ್, ಬಿ.ಬಿ. ಹರ್ತಿ, ಬಿ.ಎಸ್. ಚವಡಿ, ವಿ.ಎಸ್. ತಿರಕಣ್ಣವರ, ಎಮ್. ಎಸ್. ದೊಡ್ಡಮನಿ, ಡಿ.ಕೆ. ಕಲ್ಲೊಳ್ಳಿ, ಎಮ್.ಸಿ. ದೊಡ್ಡಮನಿ, ಅನಿಲ್ ಲಿಂಗದಾಳ ಮುಂತಾದವರಿದ್ದರು.

# ಅರುಣೋದಯ ವಾಯು ವಿಹಾರಿ ಬಳಗದಿಂದ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸುವರ್ಣ ಸಂಭ್ರಮ-ಕನ್ನಡ ರಾಜ್ಯೋತ್ಸವದ ನಿಮಿತ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ವಿಶ್ವ ದರ್ಶನ, ಪ್ರಜಾ ದರ್ಶನ ಪತ್ರಿಕೆ ಹುಬ್ಬಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಧಾರವಾಡದ ರಂಗಾಯಣದಲ್ಲಿ ಸನ್ಮಾನಿಸಲಾಯಿತು.

ಗದುಗಿನ ವಿಶ್ರಾಂತ ಪ್ರಾಧ್ಯಾಪಕ ಡಾ. ಶರಣಬಸವ ವೆಂಕಟಾಪೂರ ಇವರಿಗೆ 'ಕರ್ನಾಟಕ ಕನ್ನಡ ರತ್ನ' ಪ್ರಶಸ್ತಿ, ಮಕ್ಕಳ ಸಾಹಿತಿ ಡಾ. ತಯಬಅಲಿ ಹೊಂಬಳರಿಗೆ 'ಕರುನಾಡು ಸಾಹಿತ್ಯ ರತ್ನ' ಪ್ರಶಸ್ತಿ, ಸಾಮಾಜಿಕ ಕಾರ್ಯಕರ್ತ ಉಮೇಶ ಮಲ್ಲಪ್ಪ ಹಡಪದರಿಗೆ 'ಕರುನಾಡು ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.



ಈ ಹಿನ್ನೆಲೆಯಲ್ಲಿ, ಗದುಗಿನ ಮಸಾರಿ ವಿಭಾಗದ ಶ್ರೀ ಕಲ್ಮೇಶ್ವರ ಬೆರಳಚ್ಚು ಮತ್ತು ಕಂಪ್ಯೂಟರ್ ವಿದ್ಯಾಲಯದಲ್ಲಿ ಅರುಣೋದಯ ವಾಯು ವಿಹಾರಿಗಳ ಬಳಗದ ವಿದ್ವಾಂಸರು, ಚಿಂತಕರಾದ ಪ್ರೊ. ಆರ್.ಎಸ್. ಕುಂದಗೋಳ, ಪ್ರೊ. ಬಿ.ಬಿ. ಮಾಲಗತ್ತಿ, ಪ್ರೊ. ಬಿ.ಆರ್. ಜಾಲಿಹಾಳ, ಪ್ರೊ. ಎಮ್.ಸಿ. ವಗ್ಗಿ, ಎಚ್.ಎನ್. ಚಿಗರಿ, ಟಿ.ಎನ್. ಗೋಡಿ, ವಾಯ್.ಕೆ. ಪಿಡಗಣ್ಣವರ, ಜಿ.ಬಿ. ಚನ್ನಪ್ಪಗೌಡರ್, ಅನಂತ ಮೋಹನ ಭಟ್, ಸಿ.ಬಿ. ಸೊಲಬಣ್ಣವರ, ಎಮ್.ಬಿ. ಕರಿಬಿಷ್ಟಿ, ಎ.ಎಸ್. ಕೋಡಗಲಿ, ಎಚ್.ಬಿ. ತೋಟದ, ಎಸ್.ಸಿ. ಅಂಗಡಿ, ಜಿ.ಬಿ. ಡೋಣ್ಣಿ, ಎಮ್.ಎಫ್. ಗಣಾಚಾರಿ, ಎಸ್. ಎಮ್. ಯಂಡಿಗೇರಿ, ಎಸ್.ಬಿ. ಸಿದ್ದನಗೌಡ್ರ, ಕೆ.ಬಿ. ದೇಶಪಾಂಡೆ, ಹುಚ್ಚಪ್ಪ ಶಹಪೂರ, ಅಂದಾನಪ್ಪ ವಿಭೂತಿ, ಡೊಳ್ಳಿನ ಮುಂತಾದವರು ಸಾಧಕರನ್ನು ಅಭಿನಂದಿಸಿ, ಶುಭ ಕೋರಿದರು.

# ಗುರು ಪರಂಪರೆಯ ಸ್ಮರಣೋತ್ಸವ, ಮಕ್ಕಳ ಹಬ್ಬ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಕ್ಕಳ ಮನಸ್ಸು ಮಣ್ಣಿನ ಮುದ್ದೆಯಂತೆ. ಅದನ್ನು ಶಿಕ್ಷಕ, ಪಾಲಕರು ತಮ್ಮ ಕೈ ಚಳಕದಿಂದ ಮೂರ್ತಿಯನ್ನಾಗಿ ರೂಪಿಸಲು ಸಾಧ್ಯವಿದೆ ಎಂದು ಗದಗ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಮ್.ಎ. ರಡ್ಡೇರ ಹೇಳಿದರು.

ನರೇಗಲ್ಲ ಹಿರೇಮಠ ಸಭಾಭವನದಲ್ಲಿ ಗುರುವಾರ ನಡೆದ ಶ್ರೀ ಹಿರೇಮಠ ಜಾತ್ರಾ ಮಹೋತ್ಸವ ಹಾಗೂ ಗುರು ಪರಂಪರೆಯ ಸ್ಮರಣೋತ್ಸವ, ಧರ್ಮ ಗ್ರಂಥಗಳ ಅಡ್ಡಪಲ್ಲಕ್ಕಿ ಮಹೋತ್ಸವದ 'ಮಕ್ಕಳ ಹಬ್ಬ' ಸಮಾರಂಭದ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.




ಮಹಾಶಿವಶರಣೆ ಹೇಮರಡ್ಡಿ ಮಲ್ಲಮಾಂಬೆ ಚರಿತಾಮೃತ ಪುರಾನ ಪಠಣ ಮಾಡಿದ ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥಾಶ್ರಮಗಳಲ್ಲಿ ಗೃಹಸ್ತನ ಮನೆ ಶಾಂತಿ-ಸಹನೆ, ಧರ್ಮಪಾಲನೆ ಮಾಡುವಂತಿರಬೇಕು. ಅಂತಹ ಮಹ್ವದ ಬೆಳವಣಿಗೆಯನ್ನು ಕಂಡುಕೊಂಡ ಹೇಮರಡ್ಡಿ ಮಲ್ಲಮ್ಮ ತನ್ನ ಗಂಡನ ಮನೆಯಲ್ಲಿನ ಸಮಸ್ಯಗಳಿಗೆ ಎದೆಗುಂದದೆ ಧರ್ಮದ ಮಾರ್ಗಗಳಿಂದ ಕುಟುಂಬದ ಸದಸ್ಯರ ಮನಗೆದ್ದು ಮಹಾ ಶಿವಶರಣೆಯಾದಳು ಎಂದರು.

ಗದಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಚಾರ್ಯ ಜಿ.ಎಲ್. ಬಾರಟಕ್ಕೆ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನ್ಯಾಸಕ ಕಾಶಿನಾಥ ಪಿ.ಸಾಲಿಮಠ ಉಪನ್ಯಾಸ ನೀಡಿದರು. ಅನ್ನಪೂರ್ಣೇಶ್ವರಿ ಮಹಿಳಾ ಮಂಡಳದ ಸದಸ್ಯರು ಮತ್ತು ಜ. ಶ್ರೀ ರೇಣುಕಾಚಾರ್ಯ ಪ್ರಾಥಮಿಕ ಶಾಲೆಯ ಗುರುಮಾತೆಯರು ಭಕ್ತಿಗೀತೆ ಹಾಡಿದರು. ಶಿಕ್ಷಕ ಪಿ.ಟಿ. ಬೈಪ್ಪನವರ ಮಾರ್ಗದರ್ಶನದಲ್ಲಿ ಮಕ್ಕಳು 'ಸಿರಿಧಾನ್ಯ ರಾಮಾಯಣ' ವಿಜ್ಞಾನ ಪೂರಕ ಬಯಲಾಟ ಪ್ರಸ್ತುತ ಪಡಿಸಸಿದರು. ಶಿಕ್ಷಕ ಬಸವರಾಜ ತಳುಗೇರಿ ಸ್ವಾಗತಿಸಿದರು. ಈಶ್ವರ ಆದಿ ನಿರೂಪಿಸಿ ವಂದಿಸಿದರು.

# ಬಿವಿವಿಯ ವಾರ್ಷಿಕ ಕ್ರೀಡಾಕೂಟ ಮುಕ್ತಾಯ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಬಾಲ ವಿನಾಯಕ ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭವು ಶನಿವಾರ ನೆರವೇರಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಶೇಖರಪ್ಪ ಕವಳಿಕಾಯಿ ಮಾತನಾಡಿ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಗಳೂ ಮುಖ್ಯ. ವಿದ್ಯಾರ್ಥಿಗಳು ಓದಿನ ಜೊತೆಗೆ ಆಟವನ್ನೂ ಆಡಬೇಕು. ದೈಹಿಕವಾಗಿ ಸದೃಢರಾಗಬೇಕಾದರೆ, ನಾವು ಸೇವಿಸುವ ಆಹಾರವೂ ಅತ್ಯಮೂಲ್ಯ ಪಾತ್ರವಹಿಸುತ್ತದೆ. ನಮ್ಮ ದೇಸಿ ಆಹಾರವಾದ ಚಪಾತಿ, ರೊಟ್ಟಿ, ಅನ್ನ, ಪಲ್ಯ, ಮುಂತಾದ ಪೌಷ್ಠಿಕ ಆಹಾರವನ್ನು ತಿನ್ನಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ಶಾಲೆಯ ನಿರ್ದೇಶಕ ವಿನಾಯಕ ಆರ್, ಪ್ರಾಚಾರ್ಯ ವಿ.ಎಮ್. ಅಡ್ನೂರ್, ಉಪ ಪ್ರಾಚಾರ್ಯ ಪಿ.ಜಿ. ಬ್ಯಾಳಿ, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಮತ್ತು ಪಾಲಕರು ಉಪಸ್ಥಿತರಿದ್ದರು.

ವಾರ್ಷಿಕ ಕ್ರೀಡಾಕೂಟದಲ್ಲಿ 14 ವರ್ಷದೊಳಗಿನ ವೀರಾಗ್ರಣಿ ಪ್ರಶಸ್ತಿಯನ್ನು ವಾಹಿದ ಗೊನ್ನಾಳ ಮತ್ತು ಗೌತಮ ಗಂಗಾರಾಹೂತರ, ಬಾಲಕಿಯರ ವೀರಾಗ್ರಣಿ ಪ್ರಶಸ್ತಿಯನ್ನು ಹರ್ಷಿನಿ ಕೆ ಪಡೆದುಕೊಂಡರು. 16 ವರ್ಷದೊಳಗಿನ ಬಾಲಕರ ವೀರಾಗ್ರಣಿ ಪ್ರಶಸ್ತಿಯನ್ನು ಮೊಹಮದ್ ಐಫಾಜ್ ಮುರಾದ ಖಾನ ಮತ್ತು ಬಾಲಕಿಯರ ವೀರಾಗ್ರಣಿ ಪ್ರಶಸ್ತಿಯನ್ನು ಶ್ವೇತಾ ಯಮಗೌಳಿ ತಮ್ಮದಾಗಿಸಿಕೊಂಡರು. ಅತ್ಯುತ್ತಮ ಕ್ರೀಡಾ ಸದನ ಪ್ರಶಸ್ತಿಯನ್ನು ಶಾಲೆಯ ಹಳದಿ ಸದನ ತನ್ನದಾಗಿಸಿಕೊಂಡಿತು.

ಶಾಲೆಯ ದೈಹಿಕ ಶಿಕ್ಷಕ ಸಿದ್ಧಾಪೂರಮಠ ವಾರ್ಷಿಕ ಕ್ರೀಡಾಕೂಟದ ವರದಿ ವಾಚಿಸಿದರು. ಲಕ್ಷ್ಮೀ ಬ್ಯಾಕೋಡ ಪ್ರಶಸ್ತಿ ವಿತರಣೆ ಕಾರ್ಯಕ್ರಮ ನಿರ್ವಹಿಸಿದರು. ಪಂ. ಪುಟ್ಟರಾಜ ಮ್ಯೂಸಿಕ್ ಕ್ಲಬ್, ಶ್ರದ್ಧಾ ಮಾಗಳದ ಸಂಗಡಿಗರು ಪ್ರಾರ್ಥನಾ ಗೀತೆ ಹಾಡಿದರು. ಪೂಜಾ ಲಮಾಣಿ ಅತಿಥಿಗಳನ್ನು ಪರಿಚಯಿಸಿದಳು. ಮಿಸ್ಬಾ ಕೊಟ್ಟೂರ ಸ್ವಾಗತಿಸಿದಳು. ಅಮೋಘ ಶಾನಭಾಗ, ಶ್ರೀಗೌರಿ ಎಚ್.ಎಲ್ ನಿರೂಪಿಸಿದರು.ಅನನ್ಯಾ ದೊಡ್ಡಮನಿ ವಂದಿಸಿದಳು.

# ಗಂಡ-ಹೆಂಡತಿ ಜಗಳದಲ್ಲಿ ಬಡವಾದ ಕೂಸು!



■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ವಿಜಯನಗರ ಸಾಮ್ರಾಜ್ಯ ಕಾಲದಿಂದಲೂ ಕಲಾ ಪೋಷಣೆಗೆ ಹೆಸರಾಗಿರುವ, ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ಕಿನ್ನಾಳ ಗ್ರಾಮ ಪ್ರಸ್ತುತ ಸೂಕ್ತ ರಸ್ತೆಗಳಿಲ್ಲದೆ, ಮೂಲಭೂತ ಸೌಲಭ್ಯಗಳಿಲ್ಲದೆ ಗ್ರಾಮಸ್ಥರಷ್ಟೇ ಅಲ್ಲದೆ ಪ್ರವಾಸಿಗರೂ ಪರದಾಡುವಂತಾಗಿದೆ. ಕೊಪ್ಪಳ ಜಿಲ್ಲಾ ಕೇಂದ್ರದಿಂದ ಕೇವಲ 11 ಕಿ.ಮೀ ದೂರದಲ್ಲಿರುವ ಕಿನ್ನಾಳ ಗ್ರಾಮವನ್ನು ತಲುಪಲು ಬರೋಬ್ಬರಿ 45 ನಿಮಿಷ ಸಮಯ ಬೇಕಾಗುತ್ತಿದೆ.

ಗ್ರಾಮದ ಬಹುತೇಕ ಜನರು ತಮ್ಮೆಲ್ಲ ಕಸುಬು ಮತ್ತು ವ್ಯವಹಾರಕ್ಕಾಗಿ ಕೊಪ್ಪಳವನ್ನೇ ಅವಲಂಬಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಲೇ ಇವೆ. ಇಲ್ಲಿಯವರೆಗೆ ಕಿನ್ನಾಳ ರಸ್ತೆಯಲ್ಲಿ ಸಾವನ್ನಪ್ಪಿದವರ ಸಂಖ್ಯೆ 10ಕ್ಕೂ ಹೆಚ್ಚಿದೆ. ಆದರೆ, ಜನಪ್ರತಿನಿದಿಗಳು, ಅಧಿಕಾರಿಗಳು ಇತ್ತ ಗಮನ ಹರಿಸುತ್ತಿಲ್ಲ.

ಗಂಗಾವತಿ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಕಿನ್ನಾಳ ಗ್ರಾಮದ ರಸ್ತೆ 3 ಕಿ.ಮೀ. ಉಳಿದ 8 ಕಿ.ಮೀ ಕೊಪ್ಪಳ ವಿಧಾನಸಭಾ ವ್ಯಾಪ್ತಿಗೆ ಸೇರುತ್ತದೆ. ಗಂಡ-ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ ಇಬ್ಬರು ಶಾಸಕರನ್ನು ಪಡೆದಿದ್ದರೂ, ಪಕ್ಕದಲ್ಲೇ ಜಿಲ್ಲಾ ಕೇಂದ್ರವಿದ್ದರೂ ಅಭಿವೃದ್ಧಿ ಮಾತ್ರ ಮರೀಚಿಕೆಯಾಗಿದೆ.

ಈ ಬಗ್ಗೆ ಬೇಸತ್ತ ಗ್ರಾಮಸ್ಥರು, ಮುಂದಿನ 15 ದಿನಗಳ ಒಳಗಾಗಿ ರಸ್ತೆ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಉಗ್ರ ಹೋರಾಟಕ್ಕೆ ಮುಂದಾಗುತ್ತೇವೆ ಎಂಬ ಎಚ್ಚರಿಕೆ ನೀಡಿದ್ದು, ಕಿನ್ನಾಳ-ಕೊಪ್ಪಳ ರಸ್ತೆ ಹೋರಾಟ ಸಮಿತಿ ಸಂಚಾಲಕರಾದ ಮೌನೇಶ ಕಿನ್ನಾಳ, ದೇವರಾಜ ಹರಿಜನ, ಮಲ್ಲಪ್ಪ ಉದ್ದಾರ, ಕೆ.ಎಲ್. ರವಿಕಿರಣ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

### ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 1005 ಪ್ರಕರಣಗಳ ಪೈಕಿ ಒಟ್ಟು 272 ಪ್ರಕರಣಗಳು ಇತ್ಯರ್ಥ

# ಇತ್ಯರ್ಥಗೊಂಡ ಸಿವಿಲ್, ಕ್ರಿಮಿನಲ್ ಪ್ರಕರಣಗಳು

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಅತಿ ಹೆಚ್ಚು ಪ್ರಕರಣಗಳು ಮೋಟಾರು ವಾಹನ, ಮ್ಯಾಟ್ರಿಮೋನಿ ಹಾಗೂ ಇತರೆ ಪ್ರಕರಣಗಳಿಗೆ ಸಂಬಂಧಿಸಿದ 1005 ಪ್ರಕರಣಗಳ ಪೈಕಿ ಒಟ್ಟು 272 ಪ್ರಕರಣಗಳು ಇತ್ಯರ್ಥವಾಗಿವೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಹಿರಿಯ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಹೇಳಿದರು.

ಅವರು ಶನಿವಾರ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಕುರಿತು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಇತ್ಯರ್ಥವಾದ ಪ್ರಕರಣಗಳ ಮಾಹಿತಿ ನೀಡಿದರು.

ಕಳೆದ 20 ವರ್ಷಗಳಿಂದ ಲೋಕದಾಲತ್ ಕಾರ್ಯಕ್ರಮ ನಡೆದುಕೊಂಡು ಬಂದಿದ್ದು, ಸರ್ಕಾರದೊಂದಿಗೆ ಸೇರಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಈ ವರ್ಷದ 4ನೇ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ. ಈ ಅದಾಲತ್‌ನಲ್ಲಿ ಒಟ್ಟು 1005 ಪ್ರಕರಣಗಳನ್ನು ವಿಚಾರಣೆಗೆಂದು ಗುರುತಿಸಿಕೊಳ್ಳಲಾಗಿತ್ತು. ಆ ಪೈಕಿ ಒಟ್ಟು 272 ಪ್ರಕರಣಗಳನ್ನು ರೂ. 4,11,69,645 ಮೊತ್ತಕ್ಕೆ ಇತ್ಯರ್ಥಪಡಿಸಲಾಯಿತು ಎಂದು ಹೇಳಿದರು.




ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ಹಿರಿಯ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರ ಮಾರ್ಗದರ್ಶನದಲ್ಲಿ ಏರ್ಪಡಿಸಿದ ಈ ಅದಾಲತ್‌ನಲ್ಲಿ ನ್ಯಾಯಮೂರ್ತಿಗಳಾದ ಎಚ್.ಪಿ. ಸಂದೇಶ, ಹಂಚಾಟೆ ಸಂಜೀವಕುಮಾರ, ರಾಮಚಂದ್ರ ಡಿ.ಹುದ್ದಾರ ಮತ್ತು ವಿಜಯಕುಮಾರ ಎ.ಪಾಟೀಲ ಹಾಗೂ ಲೋಕ ಅದಾಲತ್ ಸದಸ್ಯರಾದ ಶ್ರೀವತ್ಸ ಹೆಗಡೆ, ಎಸ್.ಎಸ್. ಬಾದವಡಗಿ, ವಿ.ಜಿ. ದಳವಾಯಿ, ಡಿ.ಜೆ. ನಾಯ್ಕ ಮತ್ತು ಪ್ರಶಾಂತ ಮಠಪತಿ ಈ ರೀತಿಯಾಗಿ ಒಟ್ಟು 5 ಪೀಠಗಳನ್ನು ಆಯೋಜಿಸಲಾಗಿತ್ತು.

> ಮುಂದಿನ ದಿನಗಳಲ್ಲಿಯೂ ಸರಕಾರದ ಹಾಗೂ ಸ್ಥಳೀಯ ಸಂಸ್ಥೆಗಳ ವಿರುದ್ಧ ದಾಖಲಾಗುವ ರಿಟ್ ಅರ್ಜಿಗಳು, ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಇದೇ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಲು ಉಚ್ಚ ನ್ಯಾಯಾಲಯವು ಅವಶ್ಯಕ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಹಿರಿಯ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ತಿಳಿಸಿದರು.

ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಗೊಂಡಿವೆ. ವಿಶೇಷವೆಂದರೆ ಸುಮಾರು 40 ವರ್ಷ ಹಳೆಯ ದಿವಾಣಿ ಪ್ರಕರಣವನ್ನು ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ ಹಾಗೂ ನ್ಯಾಯಮೂರ್ತಿ ವಿಜಯಕುಮಾರ ಎ.ಪಾಟೀಲ ಅವರ ವಿಶೇಷ ಪೀಠವು ಪಕ್ಷಗಾರರ ವಕೀಲರಾದ ಡಿ.ಎಮ್. ಕುಲಕರ್ಣಿ ಹಾಗೂ ಮಹಾಂತೇಶ ಮಠದ ಇವರ ಸಹಕಾರದಿಂದ ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಿದ್ದು ಈ ಲೋಕ ಅದಾಲತ್ತಿನ ಮತ್ತೊಂದು ವಿಶೇಷತೆಯಾಗಿದೆ ಎಂದರು.

ಈ ಬಾರಿ ವಿಭಿನ್ನವಾಗಿ ಆಲೋಚಿಸಿ ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಪಕ್ಷಗಾರರಾಗಿರುವ ಪ್ರಕರಣಗಳನ್ನು ಕೈಗೆತ್ತಿಕೊಂಡು, ಅಧಿಕಾರಿಗಳಿಗೆ ಮನವರಿಕೆ ಮಾಡಿ, ಗಮನಾರ್ಹ ಸಂಖ್ಯೆಯಲ್ಲಿ ಅಂತಹ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿತ್ತು. ಈ ದಿಶೆಯಲ್ಲಿ ಎಡಿಶನಲ್ ಅಡ್ವೋಕೇಟ್ ಜನರಲ್ ಜೆ.ಎಮ್. ಗಂಗಾಧರ, ಸರಕಾರಿ ವಕೀಲರಾದ ಜಿ.ಕೆ. ಹಿರೇಗೌಡರ ಹಾಗೂ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಪಕ್ಷಗಾರರಾಗಿರುವ ಸುಮಾರು 22 ಪ್ರಕರಣಗಳನ್ನು ಇತ್ಯರ್ಥ ಪಡಿಸುವಲ್ಲಿ ಸಹಕರಿಸಿದರು ಎಎಂದು ಮಾಹಿತಿ ನೀಡಿದರು.

### ಹಿರೇಮಠದ ಜಾತ್ರಾ ಮಹೋತ್ಸವದಲ್ಲಿ ವೀರ ಯೋಧರ ಸ್ಮರಣೆ, ಗೌರವಾರ್ಪಣೆ

# ಯೋಧರ ಮನೋಸ್ಥೈರ್ಯಕ್ಕೆ ಶರಣು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಹಗಲಿರುಳೂ ನಮ್ಮನ್ನು, ದೇಶವನ್ನು ಕಾಯುತ್ತಿರುವ ಯೋಧರನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಅವರ ತ್ಯಾಗ ಮತ್ತು ಬಲಿದಾನಗಳಿಂದ ನಾವಿಂದು ಸುಖವಾಗಿದ್ದೇವೆ. ಆದ್ದರಿಂದಲೇ ನಮ್ಮ ಜಾತ್ರಾ ಮಹೋತ್ಸವದಲ್ಲಿ ಒಂದು ದಿನವನ್ನು ಯೋಧರಿಗಾಗಿ ಮೀಸಲಿರಿಸಿ ಅವರಿಗೆ ಗೌರವವನ್ನು ಸಲ್ಲಿಸುವ ಕಾರ್ಯ ಮಾಡಿದ್ದೇವೆ. ಇದರಿಂದ ನಮ್ಮ ಮನಸ್ಸಿಗೆ ತುಂಬಾ ನೆಮ್ಮದಿಯಾಗಿದೆ ಎಂದು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.

ನರೇಗಲ್ಲ ಹಿರೇಮಠದ ಜಾತ್ರಾ ಮಹೋತ್ಸವದಲ್ಲಿ ಜರುಗಿದ ವೀರ ಯೋಧರ ಸ್ಮರಣೆ ಮತ್ತು ಗೌರವಾರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಈ ದೇಶ ನಮ್ಮದು. ಅದಕ್ಕಾಗಿ ನಾವು ಎಂತಹ ತ್ಯಾಗಕ್ಕಾದರೂ ಸಿದ್ಧರಾಗಿರಬೇಕು. ಕೊನೆಗೆ ಪ್ರಾಣ ತ್ಯಾಗಕ್ಕಾದರೂ ನಾವು ಸಿದ್ಧರಿರಬೇಕೆಂಬುದನ್ನು ನಾವು ಈ ದೇಶದ ಪ್ರತಿಯೊಬ್ಬ ಸೈನಿಕನನ್ನು ನೋಡಿ ಕಲಿಯಬೇಕು. ಕರ್ತವ್ಯಕ್ಕೆ, ಸಮಯ ಪ್ರಜ್ಞೆಗೆ, ಶಿಸ್ತಿಗೆ ಇನ್ನೊಂದು ಹೆಸರೇ ಸೈನಿಕ. ತಮ್ಮ ಮನೆತನವನ್ನು, ಕುಟುಂಬವನ್ನು ಬಿಟ್ಟು ದೂರದಲ್ಲೆಲ್ಲೋ ಕಾರ್ಯ ನಿರ್ವಹಿಸುತ್ತ ದೇಶ ಸೇವೆ ಮಾಡುವ ಈ ಯೋಧರ ಮನೋಸ್ಥೈರ್ಯಕ್ಕೆ ನಾವೆಲ್ಲ ತಲೆ ಬಾಗಲೇಬೇಕು. ಅವರು ಮೈಯೆಲ್ಲ ಕಣ್ಣಾಗಿಸಿ ದೇಶದ ಗಡಿಯನ್ನು ಕಾಯುತ್ತಿದ್ದಾರೆಂದೇ ನಾವು ರಾತ್ರಿಯೆಲ್ಲ ಸುಖವಾಗಿ ನಿದ್ರೆ ಮಾಡುತ್ತಿದ್ದೇವೆ. ಕುಟುಂಬಸ್ಥರೊಂದಿಗೆ ಆರಾಮದಿಂದ ಇದ್ದೇವೆ ಎಂಬುದನ್ನು ತಿಳಿಯಬೇಕು ಎಂದು ನುಡಿದರು.




> ನಿವೃತ್ತ ಯೋಧ ಶಿವಪುತ್ರಪ್ಪ ಸಂಗನಾಳ ಮಾತನಾಡಿ, ನಿವೃತ್ತರಾದ ಮೇಲೆ ನಮ್ಮನ್ನು ಗುರುತಿಸುವವರೇ ಇಲ್ಲವೆಂದು ತಿಳಿದಿದ್ದೆವು. ಆದರೆ ನರೇಗಲ್ಲದ ಜನತೆ ನಮ್ಮನ್ನೆಂದಿಗೂ ಮರೆತಿಲ್ಲ ಎಂಬುದು ನಮಗೆ ಹಲವಾರು ಸಂದರ್ಭಗಳಲ್ಲಿ ವೇದ್ಯವಾಗಿದೆ. ಎಲ್ಲಿಯೇ ಕಾರ್ಯಕ್ರಮ ಇದ್ದರೂ, ಸಭೆ, ಸಮಾರಂಭಗಳಿದ್ದರೂ ನಮ್ಮನ್ನು ಆಮಂತ್ರಿಸಿ, ನಾವೂ ಕೂಡ ಸಮಾಜದೊಂದಿಗೆ ಬೆರಯುವಂತೆ ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮೆಲ್ಲ ನಿವೃತ್ತ ಯೋಧರ ಪರವಾಗಿ ಕೃತಜ್ಞತೆಯನ್ನು ಅರ್ಪಿಸುತ್ತೇನಲ್ಲದೆ, ಶ್ರೀಗಳು ನಮ್ಮನ್ನು ಕರೆದು ಆಶೀರ್ವದಿಸಿದ್ದಕ್ಕಾಗಿ ಅವರಿಗೂ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತೇನೆ ಎಂದರು.

ನಿವೃತ್ತ ಪ್ರಾಚಾರ್ಯ ದೊಡ್ಡಯ್ಯ ಅರವಟಗಿಮಠ ಸಿದ್ಧಾಂತ ಶಿಖಾಮಣಿಯಲ್ಲಿನ ಶೀಲ ಸಂಪಾದನ ಸ್ಥಲದ ಬಗ್ಗೆ ವಿಶೇಷ ಉಪನ್ಯಾಸ ನೀಡಿ, ಮನುಷ್ಯನು ಸುಖದಿಂದ ಬಾಳಲು ಜೀವನದಲ್ಲಿ ಅವನಿಗೆ ಮೌಲ್ಯಗಳು ಮುಖ್ಯ. ಅದರೆಡೆಗೆ ಹೆಚ್ಚಿನ ಗಮನ ನೀಡಬೇಕು. ನಮ್ಮ ಗೌರವವನ್ನು ಕಾಯ್ದುಕೊಳ್ಳಲು ನಮಗೆ ಮೌಲ್ಯಗಳು ಅವಶ್ಯಕ ಎಂದು ಪ್ರತಿಪಾದಿಸಿದರು.

ಸಭೆಯನ್ನುದ್ದೇಶಿಸಿ ಅನೇಕ ನಿವೃತ್ತ ಸೈನಿಕರು ಮಾತನಾಡಿ, ತಮ್ಮ ಸೇವಾವಧಿಯಲ್ಲಿ ತಾವು ಕಂಡುಂಡ ಕಷ್ಟ, ಸುಖ, ನೋವು, ನಲಿವುಗಳ ಬಗ್ಗೆ ಸಭಿಕರೊಂದಿಗೆ ಹಂಚಿಕೊಂಡರು. ಉಪನ್ಯಾಸಕ ಎಸ್.ಸಿ. ಗುಳಗಣ್ಣವರ ನಿರೂಪಿಸಿದರು. ಶಾಂತಪ್ಪ ಚಿಕ್ಕೊಪ್ಪದ ಸ್ವಾಗತಿಸಿದರು. ವಿರುಪಾಕ್ಷಪ್ಪ ಲಕ್ಕನಗೌಡ್ರ ವಂದಿಸಿದರು.

# 24*7 ಕುಡಿಯುವ ನೀರು ಪೂರೈಕೆಗೆ ಚಾಲನೆ



■ ವಿಜಯಸಾಕ್ಷಿ ಸುದ್ದಿ, ಗದಗ

ಅವಳಿ ನಗರದ 23ನೇ ವಾರ್ಡ್‌ನಲ್ಲಿ ನಗರಸಭಾ ಸದಸ್ಯ, ವಿರೋಧ ಪಕ್ಷದ ಉಪ ನಾಯಕ ಜನಾಬ ಬರಕತಲಿ ಮುಲ್ಲಾ, ಸಾಮಾಜಿಕ ಕಾರ್ಯಕರ್ತ ರಾಘವೇಂದ್ರ ಪಾಲನಕರ ಇವರು ನಗರಸಭೆಯ ಹಿರಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎಚ್.ಎ. ಬಂಡಿವಡ್ಡರ, ಕಿರಿಯ ಇಂಜಿನಿಯರ್ ಇಬ್ರಾಹಿಮ್ ಇವರ ನೇತೃತ್ವದಲ್ಲಿ ರೆಹಮಾನಿಯಾ ಮಸ್ಜಿದ್ ಹತ್ತಿರದ ಹಂಪಿನಗೇರಿ ಓಣಿಯಲ್ಲಿ ಅವಳಿ ನಗರದ 16ನೇ ವಾರ್ಡನಿಂದ 24ನೇ ವಾರ್ಡಿನವರೆಗೂ 24*7 ನಿರಂತರ ಕುಡಿಯುವ ನೀರಿನ ಪೂರೈಕೆಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಬಸವಣ್ಣೆಪ್ಪ ಬೀರಗೊಣ್ಣೇವರ, ವಾಟರ್ ಸೂಪರ್‌ವೈಸರ್ ದೇವಪ್ಪ ಉಪ್ಪಾರ, ಹನಮಂತಪ್ಪ ಗಾಣಿಗೇರ್, ಪ್ರಕಾಶ ಕೆರಕಲಮಟ್ಟಿ, ಮಹಾಬೂಬಸಾಬ ಅಡರಕಟ್ಟಿ, ನಾಗರತ್ನ ಬೀರಗೊಣ್ಣೆವರ, ಶಾಂತಾಬಾಯಿ ಮುಂದಿಲಮನಿ, ಖಾತುನಬಿ ದೊಡ್ಡಮನಿ, ಡಾ. ಮಸೂತಿಮನಿ, ಜಾಕೀರ ಶೇಖ, ಗಫಾರಸಾಬ್ ಚೌತಾಯಿ ಮತ್ತಿತರರು ಉಪಸ್ಥಿತರಿದ್ದರು.

# ಅಗಲಿದ ಚಿತ್ರನಟಿ ಲೀಲಾವತಿಯವರಿಗೆ ಶ್ರದ್ಧಾಂಜಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ ಅಭಿಮಾನಿಗಳ ಸಂಘ, ಡಾ. ಶಿವರಾಜ್‌ಕುಮಾರ ಅಭಿಮಾನಿಗಳ ಸಂಘ ಹಾಗೂ ರಾಜರತ್ನ ಪುನೀತ್ ರಾಜ್‌ಕುಮಾರ ಸಂಘದ ವತಿಯಿಂದ ಹಿರಿಯ ಕಲಾವಿದೆ ಲೀಲಾವತಿ ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಘದ ಗದಗ ಜಿಲ್ಲಾದಧ್ಯಕ್ಷ ವಿಠ್ಠಲ ಪರಾಪೂರ ಮಾತನಾಡಿ, ಹಿರಿಯ ಕಲಾವಿದೆ ಲೀಲಾವತಿಯವರು ಅಭಿನಯಿಸಿದ ಚಿತ್ರಗಳು ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವಂತಿದ್ದವು. ಇಂತಹ ಕಲಾವಿದೆಯನ್ನು ಕಳೆದುಕೊಂಡಿದ್ದು ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.



ಈ ಸಂದರ್ಭದಲ್ಲಿ ಗದಗ ಜಿಲ್ಲಾ ಅಟೋ ಚಾಲಕ-ಮಾಲಕರ ಸಂಘದ ಅಧ್ಯಕ್ಷ ವಿಜಯ ಕಲ್ಮನಿ, ರಾಜ್ ಕುಟುಂಬ ಸಂಘದ ಉಪಾಧ್ಯಕ್ಷ ನಾಗರಾಜ ಗುತ್ತಿ, ಶಹರ ಅಧ್ಯಕ್ಷ ಮಲ್ಲೇಶ ಪರಾಪೂರ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಸಂಗಾಪೂರ, ಮಹಿಳಾ ಜಿಲ್ಲಾಧ್ಯಕ್ಷೆ ರೇಖಾ ಬಂಗಾರಶೆಟ್ಟರ್, ಮಹಿಳಾ ಪ್ರಧಾನ ಕಾರ್ಯದರ್ಶಿ ಮೇಘನಾ ಕೊಟ್ಟೂರ, ಗಣೇಶ ಅಕ್ಕಿ, ಕೃಷ್ಣಾ ಕಲ್ಮನಿ, ಶಿವಾನಂದ ಚಲವಾದಿ, ಮುತ್ತು ಹಾದಿಮನಿ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಅಟೋ ಚಾಲಕರು ಉಪಸ್ಥಿತರಿದ್ದರು.



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಭಾವಸಾರ ಕ್ಷತ್ರೀಯ ಸಮಾಜದಿಂದ ಪಾಂಡುರಂಗ ದೇವಸ್ಥಾನದಲ್ಲಿ ಕಾರ್ತಿಕ ಉತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಮಾಜದ ಎಲ್ಲ ಸದಸ್ಯರು, ಟ್ರಸ್ಟ್ ಸದಸ್ಯರು, ಮಹಿಳಾ ಮಂಡಳ ಮತ್ತು ತರುಣ ಸಂಘದ ಸದಸ್ಯರು ಭಾಗವಹಿಸಿದ್ದರು.

## ರಾಯ್‌ಪುರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ, ಛತ್ತೀಸ್‌ಗಢ ನೂತನ ಸಿಎಂ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ರಾಯ್‌ಪುರ

ಛತ್ತೀಸ್‌ಗಢ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಒಂದು ವಾರದ ನಂತರ ಬಿಜೆಪಿ ಭಾನುವಾರ ನೂತನವಾಗಿ ಆಯ್ಕೆಯಾಗಿರುವ 54 ಶಾಸಕರ ಸಭೆ ಕರೆದಿದ್ದು, ಮುಂದಿನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ.

ಸಭೆಯ ನಂತರ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಸಸ್ಪೆನ್ಸ್‌ಗೆ ತೆರೆ ಬೀಳುವ ಸಾಧ್ಯತೆ ಇದೆ.

ಕಳೆದ ತಿಂಗಳು ನಡೆದ ಛತ್ತೀಸ್ ಗಢ ವಿಧಾನಸಭಾ ಚುನಾವಣೆಗೂ ಮುನ್ನ ಕೇಸರಿ ಪಕ್ಷ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ.

# ಗಂಗಾವತಿಯಲ್ಲಿ ನೂತನ ಸ್ನಾತಕೋತ್ತರ ಕೇಂದ್ರ

■ ವಿಜಯಸಾಕ್ಷಿ ಸುದ್ದಿ, ಗಂಗಾವತಿ

ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಕೊಪ್ಪಳ ವಿಶ್ವವಿದ್ಯಾಲಯ ಗಂಗಾವತಿಯಲ್ಲಿ ನೂತನ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಿದೆ. ಗಂಗಾವತಿ ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಎ. ಕನ್ನಡ ಮತ್ತು ಇಂಗ್ಲೀಷ್ ಹಾಗೂ ಎಂ.ಕಾಂ. ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಾಗಿದೆ.

2023-24ನೇ ಶೈಕ್ಷಣಿಕ ಸಾಲಿನ ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಈ ಹಿಂದೆ ಡಿ.3ರವರೆಗೆ ನಿಗದಿಪಡಿಸಲಾಗಿತ್ತು. ಇದೀಗ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ 14 ಡಿಸೆಂಬರ್, 2023ರವರೆಗೆ ವಿಸ್ತರಿಸಲಾಗಿದೆ.


ನೂತನ ಸ್ನಾತಕೋತ್ತರ ಕೇಂದ್ರ ಗಂಗಾವತಿ ನಗರದ ಹಳೆಯ ತಹಸೀಲ್ದಾರ್ ಕಚೇರಿಯಲ್ಲಿ ಕಾರ್ಯಾರಂಭ ಮಾಡಲಿದೆ. ಈಗಾಗಲೇ ಪ್ರಸಕ್ತ ಸಾಲಿನಲ್ಲಿ ಸ್ನಾತಕೋತ್ತರ ಪದವಿಗಳಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ತಮ್ಮ ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಗಂಗಾವತಿಗೆ ಪ್ರವೇಶದ ಆದ್ಯತೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿದ ನಂತರ ಅದರ ಒಂದು ಪ್ರತಿಯನ್ನು ಡಿ. 14ರ ಸಂಜೆ 5ರೊಳಗೆ ಕಡ್ಡಾಯವಾಗಿ ಕುಲಸಚಿವರು (ಆಡಳಿತ)(ಪ್ರಭಾರ), ಕೊಪ್ಪಳ ವಿಶ್ವವಿದ್ಯಾಲಯ, ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್-583238 ಇವರ ಕಛೇರಿಗೆ ತಲುಪಿಸಬೇಕಾಗಿದ್ದು, ಸಕಾಲದಲ್ಲಿ ತಲುಪದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ವಿ.ವಿ ಪ್ರಕಟಣೆ ತಿಳಿಸಿದೆ.

# ಗೋಸಾವಿ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಮನವಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದ ಸ್ಲಂ ನಿವಾಸಿಗಳು ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ನಗರದ ಗೋಸಾವಿ ಸ್ಲಂ ಪ್ರದೇಶದ ಅಲೆಮಾರಿ ಸಮುದಾಯದ ಕುಟುಂಬಗಳು ಸುಮಾರು 70 ವರ್ಷಗಳಿಂದ ವಸತಿ ಹಾಗೂ ಯಾವುದೇ ನಾಗರಿಕ ಸೌಲಭ್ಯಗಳಿಲ್ಲದೆ ಸಮಸ್ಯೆ ಎದುರಿಸುತ್ತಿದ್ದು, ಈ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿ ಸ್ಲಂ ಜನಾಂದೋಲನ-ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯ ಪದಾಧಿಕಾರಿಗಳು ನಗರಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು.



ಸಮಿತಿಯ ಜಿಲ್ಲಾಧ್ಯಕ್ಷ ಇಮ್ತಿಯಾಜ ಮಾನ್ವಿ ಮಾತನಾಡಿ, ಗೋಸಾವಿ ಅಲೆಮಾರಿ ಸಮುದಾಯದ ಕುಟುಂಬಗಳು ಕಳೆದ ಹಲವಾರು ದಶಕಗಳಿಂದ ಯಾವುದೇ ನಾಗರಿಕ ಸೌಲಭ್ಯಗಳಿಲ್ಲದೆ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಗೋಸಾವಿ ಸುಮುದಾಯದ ಜನರಿಗೆ ಈವರೆಗೂ ಸರ್ಕಾರದ ವಸತಿ ಯೋಜನೆಯ ಭಾಗ್ಯ ಸಿಕ್ಕಿಲ್ಲ. ಕೂಡಡಲೇ ಗೋಸಾವಿ ಸಮುದಾಯದವರಿಗೆ ವಸತಿ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಅಶೋಕ ಕುಸಬಿ, ಮಹಿಳಾ ಸಮಿತಿ ಸಂಚಾಲಕಿ ಪರವೀನಬಾನು ಹವಾಲ್ದಾರ, ಶಂಕ್ರಪ್ಪ ರೋಣ, ವಿಶಾಲಾಕ್ಷಿ ಹಿರೇಗೌಡ್ರ, ವಂದನಾ ಶ್ಯಾವಿ, ಮಕ್ತುಮ ಮುಲ್ಲಾನವರ, ಇಬ್ರಾಹಿಂ ಮುಲ್ಲಾ, ಮಲೇಶಪ್ಪ ಕಲಾಲ, ಪ್ರಕಾಶ ಹಡಗಲಿ, ಸಾಕ್ರುಬಾಯಿ ಗೋಸಾವಿ, ದಾದು ಗೋಸಾವಿ, ಖಾಜೇಸಾಬ ಇಸ್ಮಾಯಿಲನವರ, ದುರ್ಗಪ್ಪ ಮಣಿವಡ್ಡರ, ಮಂಜುನಾಥ ಶ್ರೀಗಿರಿ, ಶವಾನಂದ ಶಿಗ್ಲಿ ಸೇರಿದಂತೆ ನೂರಾರು ಸ್ಲಂ ನಿವಾಸಿಗಳು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka